

ಭಗವಾನ್ ಬುದ್ಧ

ಗಳೂರು.

ತರುಣ ಕಲಾವೃಂದ'ದ ವಿಕಸಿತ ಕುಸುಮ - ೨.

ಭಗವಾನ್ ಬುದ್ಧ

ಲೇಖಕರು:
ಮಂಜೇಶ್ವರ ಗೋವಿಂದ ಪೈ.

ಮೇ, 1954

ಬೆಲೆ ರೂ. ೦—೪—೦

ಪ್ರಕಾಶಕರು:
ತರುಣ ಕಲಾವೃಂದ, ಮಾರ್ಕೆಟ್ ರಸ್ತೆ,
ಮಂಗಳೂರು - 1.

ನಮ್ಮ ಮಾತು

ತರುಣ ಕಲಾವೃಂದದ ಎರಡನೇ ಪ್ರಕಟನೆಯಾದ 'ಭಗವಾನ್ ಬುದ್ಧ ವನ್ನು ಓದುಗರ ಮುಂದೆ ಇರಿಸಿದ್ದೇವೆ. ಮೊತ್ತಮೊದಲನೆಯ ಪ್ರಕಟನ "ನೆನಹು" ಗ್ರಂಥ ಬೆಳಕಿಗೆ ಬಂದು ಮೂರು ತಿಂಗಳುಗಳೂ ಆಗಿಲ್ಲವಾದರೂ ಇದೇ ಮೇ ತಿಂಗಳ 17ನೇ ವೈಶಾಖ ಹುಣ್ಣಿಮೆಯಂದು ಭಗವಾನ್ ಬುದ್ಧ ಜಯಂತಿಯನ್ನು ಆಚರಿಸಲು ವೃಂದವು ನಿಶ್ಚಯಿಸಿದ್ದರಿಂದ, ಆ ಸಂದರ್ಭ ದಲ್ಲಿ ಈ ಕಿರುಹೊತ್ತಗೆಯನ್ನು ಪ್ರಕಟಿಸಬೇಕೆಂಬ ಹಿರಿದಾಸೆಯಿಂದ ಈ ಪ್ರಕಟನೆಗೆ ಕೈಹಾಕಿದ್ದೇವೆ.

ಇದು ೧೯೫೪ರಲ್ಲಿ ವೈಶಾಖ ಹುಣ್ಣಿಮೆಯಂದು ತರುಣ ಕಲಾವೃಂದ ಆಶ್ರಯದಲ್ಲಿ ಜರಗಿದ ಬುದ್ಧ ಜಯಂತ್ಯುತ್ಸವದಂದು ಕಾವ್ಯರ್ಷಿ ಶ್ರೀ ಗೋವಿಂದ ಪೈಗಳು ಮಾಡಿದ ಅಧ್ಯಕ್ಷ ಭಾಷಣವಾಗಿರುತ್ತದೆ. ಇದನ್ನು ಪ್ರಕಟಿಸಲು ಅನುಮತಿಯಿತ್ತುದಕ್ಕಾಗಿ ವೃಂದವು ಕಾವ್ಯರ್ಷಿಗಳಿಗೆ ಚಿರಋಣಿಯಾಗಿದೆ.

"ನೆನಹು" ಗ್ರಂಥಕ್ಕೆ ಸಾಹಿತಿಗಳೂ, ಪತ್ರಿಕೆಗಳೂ, ಹಿತೈಷಿಗಳೂ ನೀಡಿದ ಪುರಸ್ಕಾರಕ್ಕೆ ವೃಂದವು ತುಂಬ ಕೃತಜ್ಞ.

ಇಂದಿನ ಜಾಗತಿಕ ಪರಿಸ್ಥಿತಿಯು ತೀರಾ ಹದಕೆಟ್ಟಿದೆ. ಜನರು ದಿಕು ಕಾಣದವರಂತಿದ್ದಾರೆ. ಬುದ್ಧದೇವನ ತತ್ವಗಳಿಂದಲೇ ಜಗತ್ತಿನಲ್ಲಿ ಮಾನ ವತೆಯು ಪುನಃ ಕುಡಿಯೊಡೆಯಬಹುದು.

ಈ ಕಿರು ಹೊತ್ತಗೆಯನ್ನು ಓದುಗರ ಮುಂದೆ ಅರ್ಪಿಸಿದ್ದೇವೆ.

ಮಂಗಳೂರು,
15—5—1954.

ಮುನಿಪಾಲ ರಾಜು
ಕಾರ್ಯದರ್ಶಿ.

ಭಗವಾನ್ ಬುದ್ಧ

ಬುದ್ಧ ಚರಿತ — ಬುದ್ಧ ಧರ್ಮ

ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥

ಅಂದರೆ ಎಲೇ ಅರ್ಜುನನೇ, ಎಂದೆಂದಿಗೆ ಧರ್ಮವು ನಷ್ಟವಾಗುತ್ತ ಬಂದು ಅಧರ್ಮವು ವೃದ್ಧಿಯಾಗುತ್ತ ಬರುವುದೊ, ಅಂದಂದು ನಾನು ಆತ್ಮವನ್ನು ಸೃಷ್ಟಿಸುತ್ತೇನೆ, ಅಂದರೆ ಅವತಾರವನ್ನು ಎತ್ತುತ್ತೇನೆ, ಎಂದು ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಹೇಳಿದ ಮಾತಿಗೆ ಸರಿಯಾಗಿ, ನಮ್ಮ ಸನಾತನ ಧರ್ಮದ್ದೇ ಕೊಂಬೆಯಾಗಿ ಹುಟ್ಟಿದ ಬೌದ್ಧ ಧರ್ಮದ ಮೂಲ ಪುರುಷನಾದ ಭಗವಾನ್ ಬುದ್ಧದೇವನ ಜೀವನ ಚರಿತ್ರವು ಸಂಕ್ಷೇಪವಾಗಿ ಹೀಗಿದೆ—

ಜನನ

ಉತ್ತರ ಭಾರತದ ನೇಪಾಲದಲ್ಲಿಯ ಕಪಿಲವಸ್ತು ಎಂಬ ಚಿಕ್ಕದೊಂದು ಆಗ್ಗೆ ಪ್ರಾಯಶಃ ಮಹಾಜನದ ಆಳಿಕೆಗೆ ಒಳಪಟ್ಟಿದ್ದ (ಅಂದರೆ ಈಗಿನ ಮಾತಿನಲ್ಲಿ ಹೇಳುವುದಾದರೆ (Republic ಆಗಿದ್ದ) ಗಣರಾಜ್ಯದ ಒಡೆಯನಾದ ಶಾಕ್ಯವಂಶದ ಶುದ್ಧೋದನನಿಗೆ ಇಬ್ಬರು ಹೆಂಡತಿಯರಿದ್ದರು, ಹಿರಿಯಾಕೆ ಮಾಯಾದೇವಿ, ಕಿರಿಯಾಕೆ ಆಕೆಯ ತಂಗಿ ಪ್ರಜಾಪತಿ ಗೌತಮಿ. ಕಾಲಕ್ರಮೇಣ ಮಾಯಾದೇವಿ ಬಸುರಾಗಿ ತನ್ನ ತವರ್ಮನೆಗೆ ಹೋಗಿ ಬರಲೆಂದು ಹೊರಟವಳು ಹಾದಿಯಲ್ಲಿ ಲುಂಬಿನೀ ವನ ಎಂಬಲ್ಲಿ ವೈಶಾಖ ಹುಣ್ಣಿಮೆಯಂದು ಬುದ್ಧನನ್ನು ಹೆತ್ತಳು. ನನ್ನ ನಿರ್ಣಯಿಕೆಯ ಪ್ರಕಾರ ಬುದ್ಧನು ಹುಟ್ಟಿದ ದಿನವೆಂದರೆ ಕ್ರಿ. ಪೂ. ೫೮೮ನೆಯ ಇಸವಿಯ ಮಾರ್ಚ ೩ನೆಯ ತಾರೀಕು ಶುಕ್ರವಾರ.

ಅಲ್ಲಿಂದ ಕೂಡಲೆ ತಾಯಿ-ಮಗುವನ್ನು ಕಪಿಲವಸ್ತುವಿಗೆ ಕರಕೊಂಡ ಬಂದ ೭ನೆಯ ದಿನ ತಾಯಿ ಕಾಲವಾದಳು. ಆ ಮಗುವಿಗೆ ಸಿದ್ಧಾರ್ಥ ನೆಂದು ನಾಮಕರಣವಾಯಿತು. ಹೀಗಾಗಿ ಆತನ ಹೆಸರು ಸಿದ್ಧಾರ್ಥನೆಂದೆ ವಿನಾ ಬುದ್ಧನೆಂದಲ್ಲ. ಆತನು ಮುಂದೆ ಬೋಧಿ ಜ್ಞಾನವನ (Enlightenment) ಹೊಂದಿದ ಮೇಲೆ ತಾನೆ ಬುದ್ಧನೆಂದು ಹೆಸರುವಾ ಯಾದನು. ಆ ಮುಂದೆ ಆತನ ಬಾಲ್ಯದಲ್ಲಿ ಆತನನ್ನು ಮಲತಾಯಿಯಾ ಪ್ರಜಾಪತಿ ಬೆಳಸಿದಳು.

ಆತನ ನಾಮಕರಣದಂದು ಅಲ್ಲಿಗೆ ಬಂದು ನೆರೆದಿದ್ದ ಬ್ರಾಹ್ಮಣರ ೮ ಮಂದಿ ಪ್ರಖ್ಯಾತರಾದ ಜೋಯಿಸರಿದ್ದರು. ಆ ಮಗುವಿನ ಭವಿಷ್ಯವನ ಕುರಿತು ಅರಸನು ಅವರನ್ನು ಕೇಳಿದಾಗ, ಅದು ಮುಂದೆ ಸಾರ್ವಭೌಮನೊ ಬುದ್ಧನೊ ಆಗುವನೆಂದು ಅವರಲ್ಲಿ ೭ ಮಂದಿ ಜೋಯಿಸರು ಹೇಳಿದರಲ್ಲ ಆ ಎರಡರಲ್ಲಿ ಇಂಥವನೇ ಯಾವಾತನಾಗುವನೆಂದು ಹೇಳಲಾರದೆ ಹೋದರು ೮ನೆಯ ಕೌಂಡಿನ್ಯನೆಂಬವನಾದರೊ, ಆತನು ನಿಸ್ಸಂಶಯವಾಗಿ ಬುದ್ಧನ ಆಗುವನು, ಸಾರ್ವಭೌಮನಲ್ಲ ಎಂದು ಕಂಡಿತವಾಗಿ ನುಡಿದನು. ಅದನ ಕೇಳಿ ಶುದ್ಧೋದನನಿಗೆ ಚಿಂತೆ ಹತ್ತಿತು, ಅಕಟಾ ತನ್ನ ಮಗನು ಚಿಕ್ಕಾಸ ಬಾಳದ ಭಿಕ್ಷುವಾಗುವನಲ್ಲಾ! ಎಂದು. ಆ ಘಟನೆಯನ್ನು ತಪ್ಪಿಸಲೊ ಸುಗ ತನ್ನ ಮಗನನ್ನು ಸಂಸಾರದಿಂದ ವಿಯೋಗಿಸುವ ಕಾರಣಗಳಾದರು ಯಾವುವು? ಎಂದು ವಿಚಾರಿಸುತ್ತಲೆ, ಈ ೪ ದರ್ಶನಗಳು, ಒಬ್ಬ ಮುದುಕ ಒಬ್ಬ ರೋಗಿಷ್ಟ, ಒಂದು ಹೆಣ, ಒಬ್ಬ ಸನ್ಯಾಸಿ, ಇವರನ್ನು ಕಂಡವನೆ ಆತನು ವಿರಕ್ತನಾಗುವನು ಎಂದು ಉತ್ತರ ಬಂತು. ನಾಲ್ಕೂ ನೋಟಗಳ ತನ್ನ ಮಗನ ದೃಷ್ಟಿಗೆ ಸಿಲುಕದಂತೆ ಕಟ್ಟಳೆ ಮಾಡಿದನು, ಆ ತಕ್ಕ ಮುಂಜ ಗ್ರತೆಯನ್ನು ಕೆಯ್ಕೊಂಡನು. ಸಿದ್ಧಾರ್ಥನಿಗೆ ೧೬ ವರ್ಷವಾಗುತ್ತಲೆ ಆತನಿ ಯಶೋಧರಾ ಎಂಬ ಕನ್ನಿಕೆಯೊಡನೆ ಮದುವೆಯಾಯಿತು.

ಗೃಹತ್ಯಾಗ

ಹಾಗೆಯೇ ಸಿದ್ಧಾರ್ಥನು ಅರಮನೆಯ ಸುಖಾನುಭವದಲ್ಲಿ ಹೊತ ಗಳೆಯುತ್ತಿದ್ದಾಗ ಒಂದು ದಿನ ಆತನು ರಥವೇರಿ ಕ್ರೀಡಾವನದ ಕಡೆ

ಹೊರಟು ಹೋಗುತಿದ್ದ ದಾರಿಯಲ್ಲಿ, ಒಬ್ಬ ಮುತ್ತ ಮುದುಕನನ್ನು ಕಂಡು 'ಈತನಾರು ಚನ್ನ?' ಎಂದು ಸಾರಥಿಯಾದ ಚನ್ನನೊಡನೆ ವಿಚಾರಿಸಿದನು. 'ಈತನೊಬ್ಬ ಮುದುಕ' ಎಂದನು ಚನ್ನ. 'ನಾನೂ ಹೀಗಾಗಬೇಕೇ?' ಅಹುದು, ಹುಟ್ಟಿದ ಪ್ರತ್ಯೇಕ ವ್ಯಕ್ತಿ ಹೀಗಾಗಬೇಕು' ಎಂದನು ಚನ್ನ. ಕೂಡಲೆ ಸಿದ್ಧಾರ್ಥನು ಉದ್ವಿಗ್ನನಾಗಿ ತೇರನ್ನು ಮರಳಿ ಮನೆಗೆ ಅಟ್ಟಿಸಿದನು. ಇನ್ನೊಂದು ದಿನ ಹಾಗೆಯೇ ರಥವೇರಿ ಹೋಗುತ್ತಿರುವಾಗ ಒಬ್ಬ ವ್ಯಾಧಿಗ್ರಸ್ತನನ್ನು ಕಂಡು, 'ಈತನಾರು ಚನ್ನ?' ಎಂದು ಕೇಳಿದನು. 'ಈತನೊಬ್ಬ ರೋಗಿಷ್ಟ' 'ನಾನೂ ಹೀಗಾಗಬೇಕೇ?' 'ಅಹುದು' ಎನ್ನುವುದೆ ಅಂದು ವ್ಯಾಕುಲನಾಗಿ ತೇರನ್ನು ಮನೆಗೆ ಮರಳಿಸಿದನು. ಮತ್ತೊಂದು ಬಾರಿ ತೇರು ಹತ್ತಿ ಹೋಗುವಾಗ, ನಾಲ್ವರು ಹೆಗಲಲ್ಲಿ ಇರಿಸಿಕೊಂಡು ಹೋಗುತ್ತಿರುವ ಹೆಣವನ್ನು ನೋಡಿದನು. 'ಇದೇನು ಚನ್ನ?' 'ಇದೊಂದು ಹೆಣ' 'ನಾನೂ ಹೀಗಾಗಬೇಕೇ?' 'ಎಲ್ಲರೂ ಹೀಗಾಗಬೇಕು' ಒಡನೆಯೇ ತೇರು ಹಿಂತಿರುಗಿತು. ಕೊನೆಯ ಸಲ ಒಬ್ಬ ಸನ್ಯಾಸಿಯನ್ನು ಕಂಡನು. ಆತನನ್ನು ನೋಡುತ್ತಲೆ ಸಿದ್ಧಾರ್ಥನ ಮನಸ್ಸಿನಲ್ಲಿ ಗಾಢವೂ ಅಪೂರ್ವವೂ ಆದೊಂದು ಪರಿಣಾಮ ಉಂಟಾಯಿತು, ಹಾಗೂ ಆ ಸನ್ಯಾಸಿ ಮನೆಮಾರನ್ನು ಬಿಟ್ಟು ಏಕಾಂಗಿಯಾಗಿ ತೊಳಲುತ್ತಿರುವನೆಂದು ತಿಳಿಯುತ್ತಲೆ, ತಾನೂ ಮನೆಯನ್ನು ಬಿಟ್ಟು ವಿರಕ್ತನಾಗಬೇಕು ಎಂಬ ಹಂಬಲ ಕೂಡಲೆ ಆತನಲ್ಲಿ ತಲೆದೋರಿತು. ಅಂದಿನ ಸಂಜೆ ಚಿಂತಾಕ್ರಾಂತನಾದ ಸಿದ್ಧಾರ್ಥನನ್ನು ಒಳಗೊಂಡು ರಥವು ಅರಮನೆಯನ್ನು ಸೇರಿತು.

ಹಾಗೆಯೇ ಯಶೋಧರೆ ಒಂದು ಗಂಡು ಕೂಸನ್ನು ಹೆತ್ತಳು. ಅದಕ್ಕೆ ರಾಹುಲನೆಂದು ಹೆಸರಿಟ್ಟರು. ಹೀಗೆ ಸಂಸಾರವು ಮತ್ತೊಂದು ಪಾಶವಿಕ್ಕಿ ಸಿದ್ಧಾರ್ಥನನ್ನು ಬಿಗಿಹಿಡಿದಂತೆ ತೋರಿದರೂ, ಆತನು ಆ ಸನ್ಯಾಸಿಯನ್ನು ಕಂಡು ತನ್ನಲ್ಲಿ ಹುಟ್ಟಿದ ಹಂಬಲವನ್ನು ಮರೆತಿರಲಿಲ್ಲ. ಅದು ದಿನೇ ದಿನೇ ಹೆಚ್ಚುತ್ತ ಬಂದು, ಕೆಲವೇ ದಿನಗಳಲ್ಲಿ ಆಷಾಢ ಹುಣ್ಣಿಮೆಯ ನಡುರಾತ್ರಿಯಲ್ಲಿ, ಅಂದರೆ ನನ್ನ ನಿರ್ಣಯಿಕೆಯ ಪ್ರಕಾರ ಕ್ರಿ. ಪೂ. ೫೫೪ನೆಯ ಇಸವಿಯ ಜೂನ ೧೮ನೆಯ ತಾರೀಕು ಸೋಮವಾರದ ನಡುರಾತ್ರಿಯಲ್ಲಿ ಇನ್ನಾದರೆ ಮನೆಬಿಟ್ಟು ಹೊರಡುವುದೇ ನಿಶ್ಚಯವೆಂದು ಸಿದ್ಧಾರ್ಥನು ನಿಶ್ಚ

ಯಿಸಿ ತಾನು ಮಲಗಿದ್ದ ಕೋಣೆಯಿಂದ ಎದ್ದು ಹೊರಗೆ ಬಂದು, ಸಾರಥಿ ಯಾದ ಚನ್ನನನ್ನು ಎಬ್ಬಿಸಿ ತನ್ನ ಕುದುರೆಗೆ ತಡಿಹಾಕಿ ಸಜ್ಜಿಸೆಂದು ಆಜ್ಞಾಪಿಸಿ ಆತನು ಕುದುರೆಯ ಕಡೆಗೆ ಹೋಗುವುದೆ ತಾನು ಯಶೋಧರೆಯ ಕೋಣೆಗೆ ಹೋಗಿ ನೋಡಲಾಗಿ ಆಕೆ ಮಗುವಿನ ಮೈಮೇಲೆ ಒಂದು ಕೈ ಚಾಚಿ ಮಲ ಗಿದ್ದಳು. ಆಕೆಯನ್ನು ಎಚ್ಚರಿಸಿ ಬೀಳ್ಕೊಳ್ಳಲೇ? ಎಂದರೆ ಅರಮನೆಯಲ್ಲಿ ರಂಬಾಟವೆದ್ದೀತೆಂದು ಅಳುಕಿ ಆ ಗೋಜಿಗೆ ಹೋಗದೆ, ಒಳಹೋದ ಕಾಲಿಂದಲೆ ಆಕೆಯ ಕೋಣೆಯಿಂದ ಹೊರಬಂದು, ಅಷ್ಟರಲ್ಲಿ ಚನ್ನನ ತಂದಿದ್ದ ಆ ಬಿಳಿ ಕುದುರೆಯನ್ನೇರಿ ಸದ್ದು ಸಪ್ಪುಳಿಲ್ಲದೆ ಚನ್ನನನ್ನು ಒಡಗೊಂ ಹೊರಟು ಇಬ್ಬರೂ ರಾಜಧಾನಿಯ ಅಗಸೆಯ ಬಾಗಿಲನ್ನು ದಾಟಿ ಊರ ಹೊರಗಾದರು. ಆಗ್ಗೆ ಸಿದ್ಧಾರ್ಥನಿಗೆ ೨೮ ದಾಟಿ ೨೯ನೆಯ ವರ್ಷ ನಡೆ ಯುತ್ತಿದ್ದಿತು.

ದಾರಿಯಲ್ಲಿ ಮುಂದೆ ಮುಂದೆ ಹೋಗುತ್ತ ಅನೋಮಾ ಎಂಬ ಹೊಳೆ ಯನ್ನು ದಾಟಿ ಆಚೆಗಾಗುತ್ತಲೆ, ಸಿದ್ಧಾರ್ಥನು ತನ್ನ ಮೈಮೇಲಣ ಆಭರಣ ಗಳನ್ನೆಲ್ಲ ಕಿತ್ತು ಚನ್ನನ ಕೈಗಿತ್ತು, 'ಇಗೋ, ಇವನ್ನೂ ಕುದುರೆಯನ್ನೂ ಕೊಂಡು ಊರಿಗೆ ಮರಳು, ನಾನಿನ್ನು ಶ್ರಮಣನಾಗುವೆ' ಎಂದು, ತನ್ನ ಖಡ್ಗ ದಿಂದ ತನ್ನ ಚಂಡಿಕೆಯನ್ನು ಕತ್ತರಿಸಿಕೊಂಡು, ತನ್ನ ಜರಿಯ ಹಾಗೂ ರೇಶ್ಮೆಯ ಉಡುಪನ್ನು ಕಳೆದುಬಿಟ್ಟು, ತಾನು ಕೆಯ್ಕೊಂಡ ಶ್ರವಣಿಕೆಗೆ ಒಪ್ಪುವ ಉಡುಪನ್ನು ಉಟ್ಟುಕೊಂಡು, ತನ್ನ ಹೆತ್ತವರಿಗೆ ತನ್ನ ಪ್ರಣಾಮ ಗಳನ್ನು ಅರುಹಿ ಚನ್ನನನ್ನು ಕಳುಹಿಸಿಕೊಟ್ಟನು. ಆ ಕುದುರೆಯಾದರೋ ಅಲ್ಲಿಯೇ ಪ್ರಾಣ ಬಿಟ್ಟಿತು.

ತಪಸ್ಸು-ಸಿದ್ಧಿ

ಸಿದ್ಧಾರ್ಥನು ಅಲ್ಲಿಂದ ಮುನ್ನಡೆದು ಈಗಣ ಗಯಾ ಕ್ಷೇತ್ರದ ನೆರೆಯ ಲ್ಲಿರುವ ಉರುವೇಲಾ ಅಂದರೆ ಈಗಣ ಬುದ್ಧಗಯೆ ಎಂಬಲ್ಲಿಗೆ ಹೋಗಿ ಅಲ್ಲಿ ೬ ವರ್ಷಗಳ ವರೆಗೆ ಅಖಂಡವಾದ ತಪಸ್ಸನ್ನು ಆಚರಿಸಿ, ಮಹಾಚಿತ್ತ ಸ್ಥೈರ್ಯದಿಂದ ಅಗಾಧವಾದ ಧ್ಯಾನವನ್ನು ಸಾಧಿಸತೊಡಗಿದನು. ಆಗ್ಗೆ ಆತನು ಉಪವಾಸವನ್ನು ಮಿತಿಮೀರಿ ಮಾಡಿ ದೇಹವನ್ನು ದಂಡಿಸುತ್ತಿದ್ದ

ಕಾರಣ ರಕ್ತಮಾಂಸಗಳು ಹಿಳಿದು ಹೋಗಿ ಆತನೊಂದು ಎಲುಬಿನ ಗೂಡಾಗಿ, ಮೈಯಲ್ಲಿ ತಿಲಮಾತ್ರ ತ್ರಾಣವಿಲ್ಲದೆ, ಕಣ್ಣು ಕತ್ತಲಿಸಿ ಬಿದ್ದವನು ಮತ್ತೆ ಚೇತರಿಸಿದನು.

ಆಗ್ಗೆ ಉರುವೇಲೆಯಲ್ಲಿ ಅಲ್ಲಿಯ ಊರೊಡೆಯನ ಮಗಳಾದ ಸುಜಾತೆ ಎಂಬೊಬ್ಬ ಕನ್ನಿಕೆ ಇದ್ದಳು. ಆವಂದಿನ ವೈಶಾಖ ಹುಣ್ಣಿಮೆಯ ದಿನ ಆಕೆ ಬೆಳಗಾತ ಎದ್ದು ಅಲ್ಲಿಯ ಪವಿತ್ರವಾದೊಂದು ಮರಕ್ಕೆ ಹರಕೆ ಸಲ್ಲಿಸಲೆಂದು ದನಗಳನ್ನು ಕರೆಯಲಿಕ್ಕೆ ಹೋಗುವಾಗ ತನ್ನ ತೊತ್ತನ್ನು ಕರೆದು ಆ ಮರ ದೆಡೆಗೆ ಮುಂದಾಗಿ ಹೋಗಿ ಆ ಜಾಗವನ್ನು ಚೊಕ್ಕವಡಿಸಿ ಬಾರೆಂದು ಕಳುಹಿ ದಳು. ಅಂದಿನ ಉಷಃ ಕಾಲದಲ್ಲಿ ಸಿದ್ಧಾರ್ಥನು ಎದ್ದು ಎಲ್ಲಿಯಾದರೂ ಆಹಾರ ದೊರಕೀತೋ ಎಂದು ಹುಡುಕುತ್ತ ಹೋದವನು ಅದೇ ಮರದ ಬುಡ ದಲ್ಲಿ ಕುಳಿತುಕೊಂಡಿದ್ದನು. ಆ ಮರದ ಬುಡವನ್ನು ಗುಡಿಸಲಿಕ್ಕೆಂದು ಹೋದ ತೊತ್ತು ಆತನನ್ನು ಆತನ ಮೈಯಿಂದ ಹೊರ ಹೊಮ್ಮುವ ರಶ್ಮಿಗಳ ಹೊಂಬಣ್ಣದಿಂದ ಮೆರೆವ ಆ ಮರವನ್ನು ಕಂಡು ಮನೆಗೆ ಓಡಿ ಆ ಆಶ್ಚರ್ಯ ವನ್ನು ತನ್ನ ಒಡತಿಗೆ ಅರುಹುತ್ತಲೆ, ಸುಜಾತೆ ಬಂಗಾರದ ಪಾತ್ರದಲ್ಲಿ ಕ್ಷೀರಾನ್ನ ವನ್ನು ತುಂಬಿಕೊಂಡು ಆತನಿದ್ದಲ್ಲಿಗೆ ಬಂದು ಅದನ್ನು ಆತನ ಕೈಯ್ಯಲ್ಲಿ ಇತ್ತಳು. ಅದನ್ನಾತನು ಇಸಕೊಂಡು ಅಲ್ಲಿ ಬಳಿಯಲ್ಲಿರುವ ನೈರಂಜನಾ (ಪಾಲಿ ಭಾಷೆಯಲ್ಲಿ ನೈರಂಜರಾ) ಎಂಬ ನದಿಯ ತಡಿಗೆ ಹೋಗಿ, ತನ್ನ ಹಿಂದೆ ಬುದ್ಧರಾದವರು ತಾವು ಬುದ್ಧರಾಗುವಂದು ಅಲ್ಲಿ ಯಾವ ಸ್ಥಳದಲ್ಲಿ ಮಿಂದರೊ ಅಲ್ಲಿ ಮಿಂದು, ಅಂದಿನಿಂದ ಮುಂದೆ ೭ ವಾರಗಳ ವರೆಗೆ ತನಗೆ ಅಣು ಮಾತ್ರ ವಾದರೂ ಆಹಾರವಿಲ್ಲದ ಕಾರಣ ಆ ಪಾತ್ರದಲ್ಲಿದ್ದ ಹಾಲ್ಗೋಗರವನ್ನು ಆ ವರೆಗಣ ೪೯ ದಿನಗಳಿಗೆ ಸರಿಯಾಗಿ ೪೯ ಪಾಲು ಮಾಡಿ ಅವನ್ನೆಲ್ಲ ಒಮ್ಮೆಯೇ ಉಂಡು, ತಾನು ಇಂದು ಬುದ್ಧನಾಗುವೆನಾದರೆ ಈ ಪಾತ್ರವು ಮೇಲಕ್ಕೆ ಎದ್ದು ತೇಲಿ ಹೋಗಲಿ, ಇಲ್ಲವೆ ಅದು ಈಗಲೇ ಮುಳುಗಿ ಹೋಗಲಿ, ಎಂದು ಅದನ್ನು ಹೊಳೆಗೆ ಒಗೆದನು. ಅಗೋ, ಅದು ತಟ್ಟನೆ ಮೇಲಕ್ಕೆ ಎದ್ದು ಬಂದು ಹರಿವ ನೀರಿನಲ್ಲಿ ಕಣ್ಣಿಗೆ ಕಾಣಿಸುವ ವರೆಗೆ ತೇಲಿ ಹೋಯಿತು.

ಅಂದು ಸಂಜೆ ಆ ಮಹಾಪುರುಷನು ಬೋಧಿವೃಕ್ಷವೆಂದು ಹೆಸರುವಾಸಿ ಯಾದ ಪವಿತ್ರವಾದ ಆ ಅಶ್ವತ್ಥದ ಮರದ ಕಡೆಗೆ ನಡೆದು, ತನ್ನ ತೊಗಲು

ಎಲುಬು ನರಗಳು ಬೇಕಾದರೆ ಸವೆದು ಹೋಗಲಿ, ತಾನು ಬೋಧಿ ಜ್ಞಾ
ವನ್ನು ಪಡೆದುದಲ್ಲದೆ ಇಲ್ಲಿ ಕುಳಿತಲ್ಲಿಂದ ಮಿಸುಕೆನೆಂದು ಅಲ್ಲಿ ಪದ್ಮಾಸನವ
ಕಟ್ಟಿ ಕುಳಿತುಕೊಂಡನು. ಆಗ್ಗೆ ಪಾಪ ಪುರುಷನಾದ ಮಾರನು ಸಸ್ಸೈ
ನಾಗಿ ಅಲ್ಲಿಗೆ ಬಂದು, ಆತನನ್ನು ಆ ದೃಢ ಸಂಕಲ್ಪದಿಂದ ತೊಲಗಿಸಬೇಕೆಂ
ಶತಪ್ರಯತ್ನಗಳನ್ನು ಮಾಡಿಯೂ ಏನೂ ನಡೆಸಲಾರದೆ ಸೋತು ಹೋ
ತನ್ನ ಸೇನೆಯೊಡನೆ ಹಿಂದಿರುಗಿದನು. ಸೂರ್ಯನು ಆಗ್ಗೆ ಇನ್ನೂ ಮು
ಗಿರಲಿಲ್ಲ. ಆ ರಾತ್ರಿಯ ಮೊದಲನೆಯ ಜಾಮದಲ್ಲಿ ಸಿದ್ಧಾರ್ಥನು ತ
ಹಿಂದಿನ ಜನ್ಮಗಳನ್ನು ಕುರಿತ ಜ್ಞಾನವನ್ನು ಪಡೆದನು, ಎರಡನೆಯ ಜಾಮದ
ದಿವ್ಯ ದೃಷ್ಟಿಯನ್ನು ಹೊಂದಿದನು. ಮೂರನೆಯ ಜಾಮದಲ್ಲಿ ಕಾಯ
ಕಾರಣಗಳ ಪರಂಪರೆಯ ಜ್ಞಾನವನ್ನು ದೊರಕಿಸಿಕೊಂಡನು. ಕೊನೆ
ನಾಲ್ಕನೆಯ ಜಾಮದಲ್ಲಿ ಸರ್ವಜ್ಞತೆಯನ್ನು ಪ್ರಾಪ್ತಿಸಿಕೊಂಡು ಬುದ್ಧನಾದನ
ಸಮ್ಯಾಸಂಬುದ್ಧನಾದನು. ಅಲ್ಲಿಂದ ಮುಂದೆ ಆತನಿಗೆ ಸಂಬುದ್ಧ, ತಥಾಗ
ಸುಗತ, ಧರ್ಮರಾಜ ಇತ್ಯಾದಿ ಹೆಸರಾದವು. ಆ ವೈಶಾಖ ಹುಣ್ಣಿಮೆ ಸ
ನಿರ್ಣಯಿಕೆಯ ಪ್ರಕಾರ ಕ್ರಿ. ಪೂ. ೫೪೬ನೆಯ ಇಸವಿಯ ಎಪ್ರಿಲ್ ೩ನೇ
ತಾರೀಕು ಬುಧವಾರವಾಗುತ್ತದೆ.

ಆ ಮೇಲೆ ಬುದ್ಧನು ಬೋಧಿವೃಕ್ಷದ ಬುಡದಲ್ಲಿ ೪ ವಾರ ತಂಗಿದ
೫ನೆಯ ವಾರದಲ್ಲಿ ಅಲ್ಲಿಂದೆದ್ದು ಒಂದು ಆಲದ ಮರದ ಬಳಿಗೆ ಹೋಗಿ ಅ
ಕುಳಿತು ಧರ್ಮವನ್ನು ಕುರಿತು ಚಿಂತಿಸತೊಡಗಿದನು. ಆಗ್ಗೆ ಪಾಪ ಪುರು
ನಾದ ಮಾರನು ಮತ್ತೆಯೂ ಒಮ್ಮೆ ಆತನನ್ನು ಸ್ಥಿರ ಸಂಕಲ್ಪದಿಂದ ವಂಚಿ
ವೆನೆಂದು ತನ್ನ ೩ ಮಗಳಂದಿರನ್ನು—ಅವರ ಹೆಸರು, ತೃಷ್ಣೆ ಅಂದರೆ ಅ
ಲಾಷೆ (Desire) ಅರಿತಿ ಅಂದರೆ ಉತ್ಸುಕತೆ (Pining) ಮತ್ತು ರಾ
ಅಂದರೆ ಕಾಮ (Lust)--ಆತನ ಬಳಿಗೆ ಕಳುಹಿಸಿದನು. ಅವರಾ
ಏನೂ ಮಾಡಲಾರದೆ ಹೋದರು. ಅಲ್ಲಿಂದ ಮತ್ತೊಂದು ಮರದ ಬುಡ
ಗಾಗುತ್ತ ಮರಳಿ ಆ ಆಲದ ಮರದ ಬಳಿಗೆ ಬಂದು ಅಲ್ಲಿ ಕುಳಿತುಕೊಂ
ತಾನು ಕಂಡುಹಿಡಿದ ಧರ್ಮವಿದೆಯಷ್ಟೆ, ಅದು ಮುಂದಿಯ ತಿಳುವಳಿ
ಸಿಲುಕಲಾರದಷ್ಟು ಅತ್ಯಂತ ಸೂಕ್ಷ್ಮವಿದೆ, ಅದನ್ನು ಮೊತ್ತಮೊದಲು ಯಾ
ಅರುಹಬೇಕು? ಎಂದು ಆಲೋಚಿಸುತ್ತ, ಕೆಲ ವರ್ಷಗಳ ಹಿಂದೆ ತಾ

ಅದೇ ಉರುವೇಲೆಯಲ್ಲಿ ಇದ್ದಾಗ ತನಗೆ ಉಪವಾಸ, ಯೋಗ ಸಾಧನವೇ ಮುಂತಾದ ದೇಹ ದಂಡನೆಯನ್ನು ಮಾಡಲಿಕ್ಕೆ ಬೋಧಿಸಿ, ಅದರಲ್ಲಿ ತನ್ನ ಸಹಾಭ್ಯಾಸಿಗಳಾಗಿದ್ದ ಕೌಂಡಿನ್ಯನೇ ಮೊದಲಾದ ಆ ೫ ಮಂದಿ ಭಿಕ್ಷುಗಳು ಆಗ್ಗೆ ಉರುವೇಲಿಯನ್ನು ಬಿಟ್ಟು ಕಾಶಿಯ ನೆರೆಯಲ್ಲಿಯ ಋಷಿಪಟ್ಟಣಕ್ಕೆ, ಅಂದರೆ ಈಗಣ ಸಾರನಾಥಕ್ಕೆ ಹೋಗಿದ್ದಾರೆ, ಅವರಿಗೆ ಉಪದೇಶಿಸೋಣ ಎಂದು, ತಾನು ಬೋಧಿಜ್ಞಾನ ಪಡೆದ ವೈಶಾಖ ಹುಣ್ಣಿಮೆಯಿಂದ ೨ ತಿಂಗಳು ಮುಂದಣ ಆಷಾಢ ಹುಣ್ಣಿಮೆಯಂದು ಉರುವೇಲೆಯಿಂದ ಹೊರಟು ಋಷಿ ಪಟ್ಟಣಕ್ಕೆ ಹೋಗಿ ಮುಟ್ಟಿದನು.

ಪ್ರಥಮ ಶಿಷ್ಯರು

ಆತನು ಬರುವುದನ್ನು ತಕ್ಕಷ್ಟು ದೂರದಿಂದ ಕಾಣುತ್ತಿದ್ದ ಆ ಭಿಕ್ಷುಗಳು, ಇಗೋ ಆ ಕಪಟ ಸನ್ಯಾಸಿ ಬರುತ್ತಲಿದ್ದಾನೆ, ಆತನಿಗೆ ಯಾವ ಆದರ ಸತ್ಕಾರವನ್ನಾದರೂ ಮಾಡಲಾಗದು; ಆದರೆ ಅವನು ಸತ್ಕುಲದವನಾದ್ದರಿಂದ ಒಂದು ಮಣೆಯನ್ನು ಮಾತ್ರ ಇಟ್ಟುಬಿಡೋಣ ಎಂದು ಮೈ ಮುದುರಿಸಿ ಕೆಲಸಕ್ಕೆ ಸರಿದರು. ಆದರೆ ಆತನು ಹತ್ತಿರ ಹತ್ತಿರವಾಗುತ್ತಲೆ ಅವರೆಲ್ಲರೂ ಸಹಸಾ ಮುಂದೆ ಬಂದು ಆತನನ್ನು ಸವಿನಯವಾಗಿ ಸ್ವಾಗತಿಸಿದರು. ಆಗ್ಗೆ ಭಗವಾನ್ ಬುದ್ಧನು ಅವರಿಗೆ ತನ್ನ ಮೊದಲಿನ ಧರ್ಮೋಪದೇಶವನ್ನು ಹೀಗೆ ಮಾಡಿದನು—

ಭಿಕ್ಷುಗಳೇ, ಯಾವಾತನು ಸಂಸಾರವನ್ನು ಬಿಟ್ಟು ಪ್ರವ್ರಜಿಸಲಿರುವನೊ, ಅಂದರೆ ಸನ್ಯಾಸವನ್ನು ಕೈಕೊಳ್ಳಲಿರುವನೊ, ಆತನು ಇವೆರಡು ಅಂತಗಳನ್ನು (Extremes) ನೀಗಿ ಬಿಡಬೇಕು—ಮೊದಲನೆಯ ಅಂತವೆಂದರೆ ವಿಷಯೋಪಭೋಗಗಳ ಸೇವನೆ, ಇದು ಹೀನ, ಗ್ರಾಮ್ಯ, ಅನಾರ್ಯ, ಅಜ್ಞರಿಂದ ಸೇವಿಸಲ್ಪಡುವಂಥಾದು, ೨ನೆಯದು ದೇಹದಂಡನೆ, ಇದೂ ಅನಾರ್ಯ, ದುಃಖಕಾರಕ, ಅನರ್ಥಗಳನ್ನು ಉಂಟುಮಾಡುವಂಥಾದ್ದು, ಆದಕಾರಣ ಇವೆರಡೂ ಅಂತಗಳನ್ನು ವರ್ಜಿಸಿ ತಥಾಗತನು ಅಂದರೆ ಬುದ್ಧನಾದ ತಾನು ಮಧ್ಯಮ ಮಾರ್ಗವನ್ನು ಕಂಡು ಹಿಡಿದಿರುತ್ತೇನೆ, ಅದನ್ನು ಹಿಡಿಯಬೇಕು. ಆ ಮಾರ್ಗವೆಂದರೆ ಆರ್ಯ ಅಷ್ಟಾಂಗಿಕ ಮಾರ್ಗ. ಈಗ (೧) ಜನ್ಮ

ವೆಂಬುದು ದುಃಖ, ಮುಪ್ಪು ದುಃಖ, ವ್ಯಾಧಿ ದುಃಖ, ಮರಣ ಹೇಗೂ ದುಃ
ಬೇಡವಾದವರೊಂದಿಗೆ ಕೂಡಿರುವಿಕೆ ದುಃಖ, ಬೇಕಾದವರಿಂದ ಅಗಲಿರುವಿ
ದುಃಖ, ಬೇಕಾದ ವಸ್ತು ದೊರೆಯದಿರುವಿಕೆ ದುಃಖ. ಈ ಬಗೆಯ ದುಃ
ಗಳೇ ಮೊದಲನೆಯ ಆರ್ಯ ಸತ್ಯ. (೨) ೨ನೆಯ ಆರ್ಯಸತ್ಯವೆಂ
ದುಃಖ ಸಮುದಯ, ಅಂದರೆ ಮರಳಿ ಮರಳಿ ಮನಸ್ಸಿನಲ್ಲಿ ಹುಟ್ಟಿ ಮನಸ್ಸ
ಸಕಲ ವಿಷಯಗಳಲ್ಲಿ ಆಸಕ್ತಿಗೊಳಿಸುವ ತೃಷ್ಣೆ, ಅಂದರೆ ಅಭಿಲಾಷೆ;
ತೃಷ್ಣೆ ಹೀಗೆ ೩ ವಿಧವಾಗಿದೆ- ಈ ಲೋಕದ, ಈ ದೇಹದ ಸುಖದ ಅಭಿಲಾ
ಯಾದ ಕಾಮತೃಷ್ಣೆ, ಪುನಃ ಪುನಃ ಜನ್ಮವೆತ್ತಿ ಮತ್ತೂ ಮತ್ತೂ ಸುಖ ಪಡೆ
ಬೇಕೆಂಬ ಭವತೃಷ್ಣೆ, ಪುನರ್ಜನ್ಮವನ್ನು ತೊಡೆದು ಬಿಡಬೇಕೆಂಬ ವಿಭ
ತೃಷ್ಣೆ; (೩) ಆ ತೃಷ್ಣೆಗಳನ್ನು ಅಶೇಷ ವೈರಾಗ್ಯದಿಂದ ತಡೆಗಟ್ಟಿ ಅವುಗಳನ
ನಾಶಗೊಳಿಸುವುದೇ ದುಃಖ ನಿರೋಧವೆಂಬ ೩ನೆಯ ಆರ್ಯ ಸ
(೪) ದುಃನಿರೋಧಗಾಮಿ ಮಾರ್ಗವೆಂಬ ಆ ಆರ್ಯ ಅಷ್ಟಾಂಗಿಕ ಮಾರ
ವೇ ೪ನೆಯ ಆರ್ಯ ಸತ್ಯ; ಆ ಮಾರ್ಗ ಯಾವುವೆಂದರೆ, (೧) ಈ ಜಗ
ಅಶಾಶ್ವತ, ಇದು ಯಾವಾಗಲೂ ಬದಲಾಗುತ್ತಲೆ ಇದೆ, ಈ ಪ್ರಪಂಚ ದು
ಮಯವಾಗಿದೆ, ವಿನಾಶವೂ ವಿಕಾಸವೂ ಇಲ್ಲದ ಆತ್ಮ ಎಂಬ ಅದೊಂ
ಪದಾರ್ಥವಲ್ಲ, ಎಲ್ಲವೂ ಕರ್ಮಕ್ಕೆ ಅನುಸಾರವಾಗಿ ತಾನೆ ಘಟಿಸುತ್ತಲಿ
ಎಂಬ ತಿಳುವಳಿಕೆ, ಇದೇ ಆರ್ಯ ಅಷ್ಟಾಂಗಿಕ ಮಾರ್ಗದ ಮೊದಲನೆ
ಅಂಗವಾದ ಸಮ್ಯಕ್ ದೃಷ್ಟಿ; (೨) ಏಕಾಂತವಾಸದ ಸುಖದಲ್ಲಿ ಅನುರ
ಪ್ರಾಣಿ ಮಾತ್ರರಲ್ಲಿ ಶುದ್ಧ ಪ್ರೇಮ, ಮತ್ತು ಇತರರಿಗೂ ತನಗೂ ತ್ರಾಸವಾ
ಬಾರದೆಂಬ ಇಚ್ಛೆ. ಇದು ಆ ಮಾರ್ಗದ ೨ನೆಯ ಅಂಗವಾದ ಸಮ್ಯ
ಸಂಕಲ್ಪ, (೩) ಅದರ ೩ನೆಯ ಅಂಗವಾದ ಸಮ್ಯಕ್‌ವಾಚಾ ಎಂ
ಸುಳ್ಳನ್ನು ಆಡದಿರುವಿಕೆ, ಚಾಡಿಯನ್ನು ಹೇಳದಿರುವಿಕೆ, ಪರರ ಮನಸ್ಸ
ನೋಯಿಸುವ ಕಠೋರ ಮಾತುಗಳನ್ನು ವ್ಯರ್ಥವಾದ ಗಾಳಿ ಮಾತುಗಳ
ಆಡದಿರುವಿಕೆ; (೪) ಕೊಲ್ಲದಿರುವಿಕೆ, ಕದಿಯದಿರುವಿಕೆ, ವ್ಯಭಿಚಾರ ಮಾ
ದಿರುವಿಕೆ, ಇವು ಆ ಮಾರ್ಗದ ೪ನೆಯ ಅಂಗವಾದ ಸಮ್ಯಕ್ ಕಮ
(೫) ಅದರ ೫ನೆಯ ಅಂಗವಾದ ಸಮ್ಯಕ್ ಆಜೀವವೆಂದರೆ ಜೀವನವ
ಕೆಟ್ಟ ಚಾಳಿಯಿಂದ ನಡೆಸದೆ ಒಳ್ಳೇತನದಿಂದ ತಾನೆ ಮಾಡುವಿ

(೬) ಮನಸ್ಸಿನಲ್ಲಿ ಕೆಟ್ಟ ವಿಚಾರ ಬಾರದಿದ್ದರೆ, ಅದು ಹುಟ್ಟದಂತೆ ಮಾಡುವಿಕೆ; ಕೆಟ್ಟ ವಿಚಾರ ಹುಟ್ಟಿದರೆ ಅದನ್ನು ಅಲ್ಲಿಯೇ ನಾಶಗೊಳಿಸುವಿಕೆ, ಒಳ್ಳೇ ವಿಚಾರ ಬಾರದಿದ್ದರೆ ಅದು ಹುಟ್ಟುವಂತೆ ಪ್ರಯತ್ನಿಸುವಿಕೆ, ಒಳ್ಳೇ ವಿಚಾರ ಹುಟ್ಟಿದರೆ ಅದನ್ನು ವೃದ್ಧಿಗೊಳಿಸಿ, ಪೂರ್ಣತೆಯ ಕಡೆಗೆ ಒಯ್ಯುವಿಕೆ, ಇದು ಆ ಮಾರ್ಗದ ೬ನೆಯ ಅಂಗವಾದ ಸಮ್ಯಕ್ ವ್ಯಾಯಾಮ, (೭) ಅದರ ೭ನೆಯ ಅಂಗವಾದ ಸಮ್ಯಕ್ ಸ್ಮೃತಿ ಎಂದರೆ ಈ ಶರೀರವು ಅಪವಿತ್ರವಾದ ಪದಾರ್ಥಗಳಿಂದ ಉಂಟಾಗಿದೆ ಎಂಬ ವಿವೇಕವನ್ನು ಜಾಗ್ರತೆಯಾಗಿ ಮನಸ್ಸಿನಲ್ಲಿ ಇಟ್ಟುಕೊಳ್ಳುವಿಕೆ, ಶರೀರದಲ್ಲಿಯ ಸುಖ ದುಃಖಾದಿ ವೇದನೆಗಳನ್ನೂ ತನ್ನ ಮನಸ್ಸನ್ನೂ ಬಾರಿ ಬಾರಿಗೂ ಅವಲೋಕಿಸುತ್ತಿರುವಿಕೆ, ಮತ್ತು ಕೊನೆಯ (೮) ಸಮ್ಯಕ್ ಸಮಾಧಿ ಎಂದರೆ ಎಲ್ಲಾ ಕಾಮವಾಸನೆಗಳನ್ನೂ ಇತರ ಮನೋವೃತ್ತಿಗಳನ್ನೂ ತಡೆಗಟ್ಟಿ ಯೋಗಿಯು ವಿತರ್ಕ (Conjecture & argument) ಮತ್ತು ವಿಚಾರದಿಂದ (Discrimination) ಉತ್ಪನ್ನವಾದ ಪ್ರೀತಿಯಿಂದಲೂ ಸುಖದಿಂದಲೂ ಕೂಡಿದ ಪ್ರಥಮ ಧ್ಯಾನವನ್ನು ಸಂಪಾದಿಸುತ್ತಾನೆ; ವಿತರ್ಕವೂ ವಿಚಾರವೂ ಕೊನೆಗಾಣುತ್ತಲೆ ಆತನ ಮನಸ್ಸು ಪ್ರಸನ್ನವೂ ಏಕಾಗ್ರವೂ ಆಗಿ ಆತನು ಅದರಿಂದ ಹುಟ್ಟಿದ ಪ್ರೀತಿಯಿಂದಲೂ ಸುಖದಿಂದಲೂ ಕೂಡಿದ ದ್ವಿತೀಯ ಧ್ಯಾನವನ್ನು ಸಂಪಾದಿಸುತ್ತಾನೆ. ಪ್ರೀತಿಯನ್ನು ನೀಗಿ ಬಿಡುವುದರಿಂದ ಆತನಿಗೆ ಉಪೇಕ್ಷೆಯೂ (Indifference) ಜಾಗೃತಿಯೂ (Awakening) ಉಂಟಾಗುವುದರಿಂದ ಆತನು ತೃತೀಯ ಧ್ಯಾನವನ್ನು ಸಂಪಾದಿಸುತ್ತಾನೆ. ಹೀಗೆ ಸೌಮನ್ಯವೂ (Cheerfulness) ದೌರ್ಮನಸ್ಯವೂ (Dejection) ನಾಶವಾಗುವುದರಿಂದ ಸುಖದುಃಖವೂ ಮತ್ತೆ ಆತನಿಗೆ ಇಲ್ಲದೆ, ಆತನು ಸುಖದುಃಖರಹಿತವಾದ ಹಾಗೂ ಉಪೇಕ್ಷೆಯಿಂದಲೂ ಜಾಗೃತಿಯಿಂದಲೂ ಪರಿಶುದ್ಧವಾದ ಚತುರ್ಥ ಧ್ಯಾನವನ್ನು ಸಂಪಾದಿಸುತ್ತಾನೆ; ಈ ೪ ಬಗೆಯ ಧ್ಯಾನಗಳ ಸಂಪಾದನೆಯೇ ಅಷ್ಟಾಂಗಿಕ ಮಾರ್ಗದ ಕೊನೆಯ ೮ನೆಯ ಅಂಗವಾದ ಸಮ್ಯಕ್ ಸಮಾಧಿ, ಇವೆಂಟು ಅಂಗಗಳಿಂದ ಕೂಡಿದ ಮಾರ್ಗವೇ ಆರ್ಯ ಅಷ್ಟಾಂಗಿಕ ಮಾರ್ಗ. ಈ ಧರ್ಮೋಪದೇಶಕ್ಕೆ ಧರ್ಮಚಕ್ರಪ್ರವರ್ತನ ಸೂತ್ರವೆಂದು ಹೆಸರು. ಭಗವಂತನ ಈ ಉಪದೇಶವನ್ನು ಕೇಳುತ್ತಲೆ ಕೌಂಡಿನ್ಯನಿಗೆ ಮನವರಿಕೆ

ಯಾಯಿತು, ಯಾವುದಕ್ಕೆ ಆದಿ ಇದೆಯೊ ಅದಕ್ಕೆ ಅಂತ್ಯವಿದೆ, ಯಾವುದಕ
ಹುಟ್ಟು ಇದೆಯೊ ಅದಕ್ಕೆ ಸಾವು ಇದೆ ಎಂದು. ಆ ಕಾರಣ ಆತನು ನಿರ್ವಾ
ಣದ ದಾರಿಯಲ್ಲಿ ಮೊದಲನೆಯ ಮಜಲನ್ನು ಸೇರಿದ ಫಲವನ್ನು ಹೊಂದಿದನು
ಆತನು ಬುದ್ಧನಿಂದ ದೀಕ್ಷೆಹೊಂದಿ ಆತನ ಶಿಷ್ಯನಾದನು ಆತನ ಸಂಗಡಿ
ರಾದ ಆ ಮಿಕ್ಕ ನಾಲ್ವರೂ ಅಂತೆಯೇ ದೀಕ್ಷೆ ಪಡೆದು ಶಿಷ್ಯರಾದರು. ಆಗ
ಕಾಶಿಯಲ್ಲಿದ್ದ ಧನಿಕನೊಬ್ಬನ ಮಗನಾದ ಯಶ ಎಂಬವನು ಆ ಸುದ್ದಿ ಕೇ
ಋಷಿ ಪಟ್ಟಣದ ಮೃಗಧಾಮ (Deer park) ಎಂಬ ತೋಟಕ್ಕೆ ಹೋ
ಭಗವಂತನಿಂದ ದೀಕ್ಷೆಪಡೆದು ಭಿಕ್ಷುವಾದನು. ಆತನ ಹಿಂದೆಯೇ ಆತ
ತಂದೆಯೂ ತಾಯಿಯೂ ಹೆಂಡತಿಯೂ ಬುದ್ಧನಿದ್ದಲ್ಲಿಗೆ ಬಂದು, ಆತನಿಂ
'ಬುದ್ಧಂ ಶರಣಂ ಗಚ್ಛಾಮಿ'=ನಾನು ಬುದ್ಧನನ್ನು ಮರೆಹೊಗುತ್ತೇನೆ
'ಧರ್ಮಂ ಶರಣಂ ಗಚ್ಛಾಮಿ'=ನಾನು ಬುದ್ಧನು ಉಪದೇಶಿಸಿದ ಧರ್ಮ
ವನ್ನು ಮರೆಹೊಗುತ್ತೇನೆ, 'ಸಂಘಂ ಶರಣಂ ಗಚ್ಛಾಮಿ'=ನಾನು ಬುದ್ಧ
ಸಂಘವನ್ನು ಮರೆಹೊಗುತ್ತೇನೆ, ಎಂಬ ತ್ರೈವಾಚಿಕ, ಅಂದರೆ ಈ ಮೂರು
ಮಾತುಗಳ ಮಂತ್ರವನ್ನು ಕೈಕೊಂಡು ಉಪಾಸಕರಾದರು. ಉಪಾಸಕ
ಎಂದರೆ ಸನ್ಯಾಸವನ್ನು ಕೈಕೊಳ್ಳದೆ ಮನೆ ವಾರ್ತೆಯಲ್ಲಿದ್ದು ಬುದ್ಧನ ಧರ್ಮ
ವನ್ನು ಆಚರಿಸುತ್ತಿರುವಾತನೆಂದು ಅರ್ಥ. ಹಾಗೆಯೆ ಆ ಯಶನ ೫೪ ಮಂದಿ
ಗೆಳೆಯರೂ ಅಲ್ಲಿಗೆ ಬಂದು ಭಗವಂತನಿಂದ ದೀಕ್ಷೆ ಹೊಂದಿ ಭಿಕ್ಷುಗಳಾದರು
ಹೀಗೆ ಬುದ್ಧನೂ ಕೌಂಡಿನ್ಯನೇ ಮೊದಲಾದ ಅವರೈವರೂ ಯಶನೂ ಯಶನ
ಗೆಳೆಯರೂ ಕೂಡಾ ೫೪ ಮಂದಿಯೂ ಸೇರಿ ಆಗ್ಗೆ ಒಟ್ಟಾರೆ ೬೧ ಮಂದಿ
ಅರ್ಹಂತರಿದ್ದರು. ಅವರಲ್ಲಿ ಮಿಕ್ಕ ೬೦ ಮಂದಿಯನ್ನು ಊರಿಂದೂರಿಗೆ
ಹೋಗಿ ತನ್ನ ಧರ್ಮವನ್ನು ಸಾರುತ್ತಿರಿ ಎಂದು ಅವರನ್ನು ಇತರೇತರ ೬೦
ಕಡೆಗಳಿಗೆ ಕಳುಹಿಸಿ ತಾನು ಅಲ್ಲಿಂದ ಉರುವೇಲೆಗೆ ಹೋಗಿ ಉರುವೇಲೆ
ಯಿಂದ ಮಗಧ ರಾಜ್ಯದ ರಾಜಧಾನಿಯಾದ ರಾಜಗೃಹಕ್ಕೆ ಹೋಗಿ ಅಲ್ಲಿಯ
ಯಷ್ಟಿವನದಲ್ಲಿ ಉಳಕೊಂಡನು.

ಸಾರಿಪುತ್ರ ಮೊಗ್ಗಲಾನಾ

ಭಗವಂತನು ತನ್ನ ರಾಜಧಾನಿಯಲ್ಲಿ ತಂಗಿರುವನೆಂದು ಅರಸನಾದ
ಬಿಂಬಿಸಾರನಿಗೆ ತಿಳಿಯಬರುತ್ತಲೆ ಆತನು ಅನೇಕ ಮಂದಿ ಬ್ರಾಹ್ಮಣರನ್ನು

ಒಡಗೂಡಿ ಯಷ್ಟಿವನಕ್ಕೆ ಹೋಗಿ ಆತನ ಧರ್ಮೋಪದೇಶವನ್ನು ಕೇಳಿದನು. ಅವರೆಲ್ಲರೂ ಆ ಧರ್ಮವನ್ನು ಕೈಕೊಂಡರು. ಅರಸನು ಬುದ್ಧನನ್ನು ಮರು ದಿನ ತನ್ನ ಮನೆಯಲ್ಲಿ ಭೋಜನಕ್ಕೆ ಬರಬೇಕೆಂದು ಆಮಂತ್ರಿಸಿ, ಹಾಗೆ ಆತನು ತನ್ನಲ್ಲಿಗೆ ಬಂದಾಗ ತನ್ನ ರಾಜಧಾನಿಯಲ್ಲಿದ್ದ ವೇಣುವನ ಎಂಬ ಬಿದಿರು ತೋಟವನ್ನು ಭಗವಂತನಿಗೆ ಧಾರೆಯೆರೆದು ಇತ್ತನು. ಬುದ್ಧನು ಅದನ್ನು ಸ್ವೀಕರಿಸಿ, ತಾನು ಉರುವೇಲೆಗೆ ಬಂದಿದ್ದಾಗ ತನ್ನ ಉಪದೇಶವನ್ನು ಕೈಕೊಂಡು ತನ್ನ ಧರ್ಮವನ್ನು ಅಂಗೀಕರಿಸಿದ್ದ ಹಲವು ಮಂದಿಗಳೊಂದಿಗೆ ಆ ವೇಣುವನದಲ್ಲಿ ಉಳಕೊಂಡನು.

ಬುದ್ಧನು ಅಲ್ಲಿದ್ದಾಗ, ಆತನ ಮೊತ್ತಮೊದಲಿನ ಶಿಷ್ಯರಾದ ಕೌಂಡಿನ್ಯನೇ ಮೊದಲಾದ ಆ ಐವರಲ್ಲಿ ಒಬ್ಬನಾದ ಅಶ್ವಜಿತ್ (ಪಾಲಿ ಭಾಷೆಯಲ್ಲಿ ಅಸ್ಸಜಿ) ಎಂಬೊಬ್ಬನು ಮನೆಮನೆಗೆ ಹೋಗಿ ಭಿಕ್ಷೆ ಬೇಡುವುದನ್ನು ಕಂಡು ಸಾರಿಪುತ್ರ (ಪಾಲಿ: ಸಾರಿಪುತ್ತ) ಎಂಬಾತನು ಆತನನ್ನು ಕುರಿತು ನೀನು ಯಾರ ಶಿಷ್ಯ ನೆಂದು ವಿಚಾರಿಸಲು, ತಾನು ಶಾಕ್ಯ ಕುಲದ ಮಹಾಶ್ರಮಣನ ಶಿಷ್ಯನೆಂದೂ ಆತನು ಉಪದೇಶಿಸುವ ಧರ್ಮ ಕೂಲಂಕಷವಾಗಿ ತಾನು ಅರಿಯೆನಾದರೂ ವಸ್ತುಗಳೂ ಅವಸ್ಥೆಗಳೂ ಯಾವ ಯಾವ ಕಾರಣಗಳಿಂದ ಹುಟ್ಟುತ್ತಿವೆ, ಅವುಗಳ ನಿಗ್ರಹ ಹೇಗಾಗುತ್ತದೆ ಎಂಬುದನ್ನು ಆ ಮಹಾ ಶ್ರಮಣನು ವಿವರಿಸಿದ್ದಾನೆ, ಎಂದಿಷ್ಟು ಬಲ್ಲೆನೆಂದೂ ಆತನು ಹೇಳುತ್ತಲೆ, ಸಾರಿಪುತ್ತನು ಅದನ್ನು ಕೇಳಿ ತನ್ನ ಗೆಳೆಯನಾದ ಮೌದ್ಗಲ್ಯಾಯನ (ಪಾಲಿ: ಮೊಗ್ಗಲಾನಾ)ನೊಂದಿಗೆ ಬುದ್ಧನಿದ್ದಲ್ಲಿಗೆ ಹೋಗಿ, ಆತನಿಂದ ಮೇಲೆ ಹೇಳಿದ ಆ ತ್ರೈವಾಚಿಕ ಮಂತ್ರದ ಉಪದೇಶವನ್ನು ಅವರಿಬ್ಬರೂ ಹೊಂದಿದರು. ಸಾರಿಪುತ್ತನು ಒಂದೇ ವಾರ ದಲ್ಲಿ, ಮೊಗ್ಗಲಾನನು ೨ ವಾರಗಳಲ್ಲಿ ಅರ್ಹತ್ಪದವಿಯನ್ನು ಪಡೆದು ಅವರಿಬ್ಬರೂ ಬುದ್ಧನ ಶಿಷ್ಯರಲ್ಲಿ ಪ್ರಮುಖರಾದ ಇಬ್ಬರು ಶಿಷ್ಯರಾದರು.

ಆಗ್ಗೆ ತನ್ನ ಮಗನಾದ ಸಿದ್ಧಾರ್ಥನು ಬುದ್ಧನಾಗಿ ಈಗ ರಾಜಗೃಹದ ವೇಣುವನದಲ್ಲಿದ್ದಾನೆ ಎಂಬ ಸುದ್ದಿ ಆತನ ತಂದೆಯಾದ ಶುದ್ಧೋದನನ ಕಿವಿಗೆ ಮುಟ್ಟಿತು. ಅವನು ಎಷ್ಟೋ ಬಾರಿ ಎಷ್ಟೋ ದೂತರನ್ನು ಆತನನ್ನು ಕರತರಲಿಕ್ಕೆ ಕಳುಹಿಸಿದನು. ಆದರೆ ಅವರೆಲ್ಲರೂ ಬುದ್ಧನಿಂದ ದೀಕ್ಷೆ ಹೊಂದಿ ಅಲ್ಲಿಯೇ ಉಳಕೊಂಡರಲ್ಲದೆ ಒಬ್ಬನಾದರೂ ಶುದ್ಧೋದನನ ಬಳಿಗೆ ಮರಳ

ಲಿಲ್ಲ; ಕೊನೆಗೊಬ್ಬ ದೂತನು ಬುದ್ಧನಿಗೆ ಹೀಗೆಂದನು, 'ಭಗವಾನ್, ನಿನ್ನ ತಂದೆ ನಿನ್ನನ್ನು ನೋಡಲೆಳಸುತ್ತಾನೆ. ಒಮ್ಮೆ ಬಂದು ಆತನನ್ನು ನೋಡು' ಎಂದು. ಕೂಡಲೆ, ಬರುವೆನೆಂದು ಬುದ್ಧನು ಕಪಿಲವಸ್ತುವಿಗೆ ಹೊರಟು ಅಲ್ಲಿಗಾದನು. ಶಾಕ್ಯರೆಲ್ಲರೂ ಆತನನ್ನು ಪುರಸ್ಕರಿಸಿದರು.

ಅರಮನೆಯ ಮುಂದೆ

ಮರುದಿನ ಭಗವಂತನು ಭಿಕ್ಷಾ ಪಾತ್ರವನ್ನು ಕೈಕೊಂಡು ಕಪಿಲವಸ್ತುವಿನಲ್ಲಿ ತಿರುಪೆ ಎತ್ತಲಿಕ್ಕೆ ಹೊರಟನು. ರಾಹುಲನ ತಾಯಿಯಾದ ಯಶೋಧರೆ ಅರಮನೆಯ ಮೇಲ್ಮಾಳಿಗೆಯಿಂದ ಕಾವೀ ಬಟ್ಟೆಯನ್ನು ಉಟ್ಟ ಭಿಕ್ಷೆ ಬೇಡುತ್ತಿದ್ದ ಆತನನ್ನು ನೋಡುತ್ತಿದ್ದಾಗ, ಆಕೆಗಾದರೂ ಭಿಕ್ಷುವಾಗಿದ್ದ ಆತನು ರಾಣೀವಿಯಲ್ಲಿ ಇದ್ದಾಗ ಕಾಣುತಿದ್ದುದಕ್ಕಿಂತ ಎಷ್ಟೋ ತೇಜಸ್ವಿಯಾಗಿ ತೋರಿದನು. ಆಕೆ ಆತನನ್ನು ಕೊಂಡಾಡುತ್ತ, ಶುದ್ಧೋದನನಿಗೆ ಹೇಳಿದಳು 'ಇಗೋ ನಿಮ್ಮ ಮಗನು ಸನ್ಯಾಸಿಯಾಗಿ ಬೀದಿಯಲ್ಲಿ ತಿರುಪೆ ಎತ್ತುತ್ತಾನೆ' ಎಂದು. ಶುದ್ಧೋದನನು ಕೂಡಲೆ ಅರಮನೆಯಿಂದ ಹೊರಕ್ಕೆ ಬಂದು ಆತನನ್ನು ಕಂಡು, ಈ ಭಿಕ್ಷುವೃತ್ತಿ ರಾಜಮನೆತನದವನಾದ ನಿನಗೆ ಸಲ್ಲ ದೆಂದಾಗ, ಭಗವಂತನು 'ಅರಸಾ ಆ ರಾಜ ಪೀಳಿಗೆ ನಿನ್ನದು ನನ್ನದಾದರೋ ದೀಪಂಕರ ಬುದ್ಧನಿಂದ ಮೊದಲ್ಗೊಂಡು ಕಾಶ್ಯಪ ಬುದ್ಧನ ವರೆಗೆ ಇಳಿತಂದ ಬುದ್ಧರ ಪೀಳಿಗೆ, ಆ ಬುದ್ಧರೆಲ್ಲರೂ ಭಿಕ್ಷುವೃತ್ತಿಯಿಂದಲೇ ಜೀವಿಸಿದರು' ಎಂದು ಉತ್ತರವಿತ್ತನು. ಅಲ್ಲಿಂದ ಕೂಡಲೆ ಶುದ್ಧೋದನನು ನಿರ್ವಾಣದ ಹಾದಿಯಲ್ಲಿ ಮೊದಲನೆಯ ಹಂತವನ್ನು ದಾಟಿದನು. ಆ ಬಳಿಕ ಶುದ್ಧೋದನನು ಭಗವಂತನನ್ನೂ ಆತನ ಅನುಯಾಯಿಗಳನ್ನು ಅರಮನೆಗೆ ಕರೆದೊಯ್ಯಲು ರಾಣಿವಾಸದ ಹೆಂಗಸರೆಲ್ಲರೂ ಬಂದು ಆತನಿಗೆ ಅಭಿವಂದಿಸಿದರು. ರಾಹುಲನ ತಾಯಿ ಮಾತ್ರ ಬರಲಿಲ್ಲ. ಆಗ್ಗೆ ಬುದ್ಧನು ಸಾರಿಪುತ್ತನನ್ನು ಮೊಗ್ಗಲಾನನ್ನು ಒಳಗೊಂಡು ಆಕೆಯ ಅಂತಃಪುರವನ್ನು ಪ್ರವೇಶಿಸುತ್ತಲೆ, ಆಕೆ ಮುಂದೆ ಬಂದು ಆತನ ಕಾಲಲ್ಲಿ ಬಿದ್ದಳು. ಬುದ್ಧನು ಕಪಿಲವಸ್ತುವಿನಲ್ಲಿ ಇದ್ದ ೭ನೆಯ ದಿನ, ಆತನು ತಿರುಪೆ ಎತ್ತಿ ಅರಮನೆಗೆ ಮರಳುತ್ತಲೆ, ರಾಹುಲನ ತಾಯಿ ಮಗನನ್ನು ಕರೆದು 'ಇಗೋ ಈ ಭಿಕ್ಷು ನಿನ್ನ ತಂದೆ,

ಆತನೊಡನೆ ನಿನ್ನ ದಾಯ ಭಾಗವನ್ನು (ಅಂದರೆ ಆತನ ಆಸ್ತಿಯಲ್ಲಿ ನಿನ್ನ ಪಾಲನ್ನು) ಕೇಳಿಕೋ' ಎಂದಳು. ಆಗ್ಗೆ ಬುದ್ಧನು ರಾಹುಲನಿಗೆ ಧಾರ್ಮಿಕ ದಾಯ್ಯ ಭಾಗವನ್ನು (Spiritual inheritance) ಕೊಡಲೆಳಸಿ, ಸಾರಿ ಪುತ್ತನ್ನು ಕರೆದು, ಆತನಿಂದ ರಾಹುಲನಿಗೆ ಪಾಲಿ ಭಾಷೆಯಲ್ಲಿ ಸಾಮಣೇರ ಪಬ್ಬಜ್ಜಾ ಎಂಬ ನವಶಿಷ್ಯ ಪ್ರವ್ರಜ್ಯೆಯನ್ನು (Novice Ordination), ಅಂದರೆ ಸನ್ನ್ಯಾಸದ ಅಭ್ಯಾಸವಿಲ್ಲದ ವಟುಗಳಿಗೆ ಕೊಡುವ ದೀಕ್ಷೆಯನ್ನು ಕೊಡಿಸಿದನು. ಅದನ್ನು ಕಂಡು ಮಗನನ್ನೇ ಅಲ್ಲ ಮೊಮ್ಮಗನನ್ನೂ ಕಳ ಕೊಂಡೆನೆಂದು ಸಿಟ್ಟುಗೊಂಡ ಶುದ್ಧೋದನನು, ಇನ್ನಾದರೂ ಹೆತ್ತವರ ಅಪ್ಪಣೆ ಇಲ್ಲದೆ ಯಾರನ್ನೂ ದೀಕ್ಷಿಸದಂತೆ ಬುದ್ಧನ ಒಪ್ಪಿಗೆಯನ್ನು ಪಡಕೊಂಡನು.

ಕಪಿಲ ವಸ್ತುವಿನಿಂದ ಬುದ್ಧನು ರಾಜಗೃಹಕ್ಕೆ ಹೊರಟುಹೋದ ದಾರಿ ಯಲ್ಲಿ ಮಲ್ಲರೆಂಬ ಜನಾಂಗದವರ ಅನುಪಿಯ ಎಂಬ ಊರಿನಲ್ಲಿ ಉಳಕೊಂಡಿ ದ್ದಾಗ ಕಪಿಲವಸ್ತುವಿನಲ್ಲಿ ಎಷ್ಟೋ ಮಂದಿ ಆತನ ಧರ್ಮಕ್ಕೆ ಸೇರಿದರು. ಅವರಲ್ಲಿ ಮುಖ್ಯರಾದವರೆಂದರೆ, (೧) ಆತನ ಚಿಕ್ಕಪ್ಪನಾದ ಅಮೃತೋದನನ ಮಗನಾದ ಆನಂದ— ಈತನು ಬುದ್ಧನ ಅಕ್ಕರೆಯ ಶಿಷ್ಯನಾಗಿದ್ದನು— ಮತ್ತು (೨) ಬುದ್ಧನ ಮತ್ತೊಬ್ಬ ಚಿಕ್ಕಪ್ಪನಾದ ಶುಕ್ಲೋದನನ ಮಗನಾದ ಅನುರುದ್ಧ ಇವರಿಬ್ಬರೂ ಕೊನೆಯ ವರೆಗೂ ಬುದ್ಧನ ಜೊತೆಯಲ್ಲಿದ್ದರು. ಇವರಲ್ಲದೆ ಶಾಕ್ಯವಂಶದ ಮತ್ತೂ ಕೆಲವು ರಾಜಕುಮಾರರು ಉಪಾಲಿ ಎಂಬ ಕ್ಷೌರಕ ನನ್ನು ಒಡಗೂಡಿ ದೀಕ್ಷೆಗಾಗಿ ಅನುಪಿಯಕ್ಕೆ ಹೋದರು. ಕೊಂಚ ದಾರಿ ಸಾಗುತ್ತಲೆ ಆ ರಾಜಕುಮಾರರೆಲ್ಲರೂ ತಮ್ಮ ಸೊಗಸಾದ ಬಟ್ಟೆಗಳನ್ನು ಕಳೆದು ಅವನ್ನು ಉಪಾಲಿಗೆ ಇತ್ತರು. ಆತನು ಅವನ್ನು ತೆಗೆದುಕೊಳ್ಳದೆ ತಾನೂ ದೀಕ್ಷೆ ಹೊಂದುವೆನೆಂದನು. ಅವರು ಅನುಪಿಯಕ್ಕೆ ಹೋಗಿ ಭಗ ವಂತನನ್ನು ಕಾಣುವುದೆ ತಮಗೆ ದೀಕ್ಷೆ ನೀಡಬೇಕೆಂದು ಕೇಳಿಕೊಂಡುದಲ್ಲದೆ, ತಮಗಿಂತಲೂ ಮೊದಲು ಉಪಾಲಿಗೆ ಕೊಡಬೇಕೆಂದು ಯಾಚಿಸಿದರು. ಅವರೆಲ್ಲರಿಗೂ ದೀಕ್ಷೆಯಾಯಿತು. ಅಲ್ಲಿಂದ ಬುದ್ಧನು ರಾಜಗೃಹಕ್ಕೆ ಹೋದನು.

ಶ್ರಾವಸ್ತಿಯಲ್ಲಿ

ಕೋಸಲ ದೇಶದ ಶ್ರಾವಸ್ತಿ ಎಂಬ ಊರಿನವನಾದ ಹಾಗೂ ತನ್ನ ದಾನ

ಧರ್ಮದಿಂದ ಅನಾಥ ಪಿಂಡಿಕನೆಂದು ಹೆಸರುವಾಸಿಯಾದ ಸುದತ್ತನೆಂ
ಧನಾಢ್ಯನಾದ ವ್ಯಾಪಾರಿ, ಬುದ್ಧನು ರಾಜಗೃಹದಲ್ಲಿ ಇರುವನೆಂದು ಕೇ
ಆತನಿದ್ದಲ್ಲಿಗೆ ಹೋಗಿ ಆತನನ್ನು ಕಂಡು, ಶ್ರಾವಸ್ತಿಗೆ ಬರಬೇಕೆಂದು ಆತನನ
ಆಹ್ವಾನಿಸಿದನು. ಬುದ್ಧನು ಅದಕ್ಕೆ ಒಪ್ಪುತ್ತಲೆ ಅನಾಥ ಪಿಂಡಿಕನು ಶ್ರಾ
ಸ್ತಿಗೆ ಬಂದು ಜೇತನೆಂಬ ಒಬ್ಬ ರಾಜಕುಮಾರನ ಜೇತವನವೆಂಬ ತೋಟವನ
ಬೆಲೆಗೆ ಪಡಕೊಂಡು, ಅಲ್ಲಿ ಸೊಗಸಾದ ಒಂದು ವಿಹಾರವನ್ನೂ ಅಂದ
ಮಠವನ್ನು ಕಟ್ಟಿಸಿ, ಅದರಲ್ಲಿ ಬುದ್ಧನ ಬಗ್ಗೆ ಗಂಧಕುಟಿ ಎಂಬ ಬೇರೆಯ
ಕೋಣೆಯನ್ನು ಸುತ್ತಲೂ ಭಿಕ್ಷುಗಳ ಬಗ್ಗೆ ಕೋಣೆಗಳನ್ನೂ ವಿರಚಿಸಿ
ಬುದ್ಧನು ಅಲ್ಲಿಗೆ ಬಂದು ಮುಟ್ಟುತ್ತಲೆ ಆತನ ಆಜ್ಞೆಯ ಮೇರೆಗೆ ಆ ವಿಹಾ
ವನ್ನು ಅಂದಿನ—ಮುಂದಿನ ಸಂಘಕ್ಕೆ ಎಂದು ಧಾರಾಪೂರ್ವಕವಾಗಿ ದ
ಬಿಟ್ಟನು.

ಆಗ್ಗೆ ಶ್ರಾವಸ್ತಿಯಲ್ಲಿ ಪ್ರಸೇನಜಿತ್ (ಪಾಲಿಯಲ್ಲಿ ಪಸೇನದಿ) ಎಂ
ಅರಸನು ಆಳುತಿದ್ದನು. ಆತನು ರಾಜಗೃಹದ ಅರಸನಾದ ಬಿಂಬಿಸಾರ
ಭಾವ. ಶ್ರಾವಸ್ತಿಯಲ್ಲಿ ಮಿಗಾರನೆಂಬೊಬ್ಬ ಧನಾಢ್ಯನಾದ ವ್ಯಾಪಾ
ಇದ್ದನು. ಆತನ ಮಗನಾದ ಪೂರ್ಣವರ್ಧನನು ಅಂಗದೇಶದ ಭದ್ರಂಕ
(ಪಾಲಿಯಲ್ಲಿ ಭದ್ದಿಯ) ಎಂಬ ಊರಿನ ಧನಂಜಯನ ಮಗಳಾದ ವಿಶಾಖ
ಎಂಬವಳನ್ನು ಮದುವೆಯಾಗಿದ್ದನು. ಆಕೆ ೭ ವರ್ಷದವಳಿದ್ದಾಗ ಬುದ್ಧನ
ಆಕೆಯನ್ನು ಕಂಡು ಆಕೆಗೆ ತನ್ನ ಧರ್ಮದಲ್ಲಿದ್ದ ಅಭಿಮಾನವನ್ನು ಕಂಡ
ಮೆಚ್ಚಿದ್ದನು. ಬುದ್ಧನು ಶ್ರಾವಸ್ತಿಗೆ ಬಂದಾಗ ಆಕೆ ಬುದ್ಧನಿಗೂ ಸಂಘಕ
ತುಂಬ ಸೇವೆಯನ್ನು ಸಲ್ಲಿಸಿ ದಿಗಂಬರ ಜೈನ ಧರ್ಮದವನಾಗಿದ್ದ ತನ್ನ ಮಾ
ನಾದ ಮಿಗಾರನನ್ನು ಜೈನ ಧರ್ಮವನ್ನು ಬಿಟ್ಟು ಬೌದ್ಧ ಧರ್ಮಕ್ಕೆ ಬರುವಂ
ಮಾಡಿದಳು. ಆ ಕಾರಣ ಆಕೆಗೆ ಮಿಗಾರ ಮಾತಾ, ಅಂದರೆ ಮಿಗಾರ
ತಾಯಿ ಎಂದು ಹೆಸರಾಯಿತು. ಆಕೆ ಶ್ರಾವಸ್ತಿಯ ನೆರೆಯಲ್ಲಿ ಪೂರ್ವಾರಾವ
ಎಂಬದೊಂದು ವಿಹಾರವನ್ನು ಬುದ್ಧಸಂಘಕ್ಕೆ ಮಾಡಿಸಿಕೊಟ್ಟಳು.

ಬುದ್ಧನ ದೃಷ್ಟಿಯಲ್ಲಿ ಸ್ತ್ರೀ

ಅಲ್ಲಿಂದ ಕೆಲ ವರ್ಷಾನಂತರ ತನ್ನ ತಂದೆಯಾದ ಶುದ್ಧೋದನನ

ಮರಣೋನ್ಮುಖನಾಗಿರುತ್ತಾನೆಂದು ಬುದ್ಧನಿಗೆ ಸುದ್ದಿ ಬರುತ್ತಲೆ ಆತನು ಕಪಿಲವಸ್ತುವಿಗೆ ಹೋಗಿ ಎಲ್ಲವೂ ಅಸ್ಥಿರ, ಎಲ್ಲವೂ ನಶ್ವರವೆಂದು ತಂದೆಗೆ ಬೋಧಿಸಿದನು. ಶುದ್ಧೋದನನು ಮರಣಪಟ್ಟ ಬಳಿಕ ಆತನ ೨ನೆಯ ಹೆಂಡತಿಯಾದ ಪ್ರಜಾಪತಿ ಗೌತಮಿ ತನ್ನನ್ನು ಪರಿವ್ರಾಜಿಕೆ (Nun) ಯಾಗಿಸಬೇಕೆಂದು ಬುದ್ಧನೊಡನೆ ಕೇಳಿಕೊಂಡಳು. ಭಗವಂತನು ಅದಕ್ಕೆ ಒಪ್ಪದೆ ಹೆಂಗಸರನ್ನು ಸಂಘದಲ್ಲಿ ಸೇರಿಸಿಕೊಳ್ಳಲೊಲ್ಲದೆ, ಅಲ್ಲಿಂದ ವೈಶಾಲಿ ಎಂಬ ಊರಿಗೆ ಹೋದನು. ಆದರೆ ಗೌತಮಿಯೂ ಮತ್ತೆ ಕೆಲವು ಹೆಂಗಸರೂ ಆ ಮಾತನ್ನು ಕಿವಿಗೆ ಹಾಕಿಕೊಳ್ಳದೆ, ತಮ್ಮ ಕೂದಲನ್ನು ಕತ್ತರಿಸಿ ಕಾವೀ ಬಟ್ಟೆಗಳನ್ನು ಉಟ್ಟು ಕಾಲುನಡಿಗೆಯಿಂದ ವೈಶಾಲಿಗೆ ಹೋಗಿ ಅಲ್ಲಿಯ ಮಹಾವನದಲ್ಲಿ ಬುದ್ಧನಿದ್ದ ಕೂಟಾಗಾರವನ್ನು ಹೊಕ್ಕರು. ಅವರನ್ನು ಕಂಡು ಹಾಗೂ ಅವರು ಅಲ್ಲಿಗೆ ಬಂದ ಕಾರಣವನ್ನು ಅರಿತುಕೊಂಡು ಆನಂದನು ಆ ಕುರಿತು ಬುದ್ಧನಿಗೆ ಅರುಹಿ ಅವರ ಬಗೆಗಾಗಿ ಆತನನ್ನು ಬೇಡಿಕೊಂಡುದಕ್ಕೆ ಒಪ್ಪಿ ಬುದ್ಧನು ತನ್ನ ಸಾಕುತಾಯಿಯಾದ ಗೌತಮಿಗೂ ಇತರ ಹೆಂಗಸರಿಗೂ ಪರಿವ್ರಾಜಿಕೆಯರಾಗಲಿಕ್ಕೆ ಅನುಮತಿಯನ್ನಿತ್ತನಾದರೂ ಆತನು ಹೀಗೆಂದನು, 'ಹೆಂಗಸರನ್ನು ಸಂಘದಲ್ಲಿ ಸೇರಗೊಡದಿದ್ದರೆ, ಧರ್ಮವು ೧೦೦೦ ವರ್ಷ ಬಾಳುತಿತ್ತು; ಆದರೆ ಅವರ ಚಾರಿತ್ರ್ಯವೂ ಧಾರ್ಮಿಕತ್ವವೂ ಬಹುಕಾಲ ಬಾಳಲೊಲ್ಲದುದರಿಂದ, ಧರ್ಮವು ೫೦೦ ವರ್ಷ ಬಾಳಬಹುದಷ್ಟೇ.

ಬ್ರಾಹ್ಮಣ ಯತಿಗಳು ಪ್ರತಿ ವರ್ಷದ ಆಷಾಢ ಹುಣ್ಣಿಮೆಯಿಂದ ಕಾರ್ತಿಕ ಹುಣ್ಣಿಮೆಯ ವರೆಗೆ ಹೇಗೆ ವರ್ಷಾಕಾಲದ ಚಾತುರ್ಮಾಸ್ಯವ್ರತವನ್ನು ಕೆಯ್ಕೊಂಡು ಒಂದೇ ಸ್ಥಳದಲ್ಲಿದ್ದು ಮಳೆಗಾಲವನ್ನು ನೂಕಬೇಕೋ, ಹಾಗೆಯೇ ಬುದ್ಧನೂ ಚಾತುರ್ಮಾಸವನ್ನು ಆಚರಿಸುತ್ತಿದ್ದನು, ಬೌದ್ಧ ಯತಿಗಳೂ ಈಗಲೂ ಅದನ್ನು ಆಚರಿಸುತ್ತಿದ್ದಾರೆ. ಆತನು ಬುದ್ಧನಾದಂದಿನಿಂದ ೧೪ನೆಯ ವರ್ಷದ ಚಾತುರ್ಮಾಸ್ಯವನ್ನು ಆತನು ಶ್ರವಸ್ತಿಯ ಜೇತವನದಲ್ಲಿ ಕಳೆಯುತ್ತಿದ್ದಾಗ ಆತನ ಮಗನಾದ ರಾಹುಲನು ದೀಕ್ಷೆ ಹೊಂದಿದನು. ಆ ಮಳೆಗಾಲ ಕಳೆಯುತ್ತಲೆ ಭಗವಂತನು ಕಪಿಲವಸ್ತುವಿಗೆ ಬಂದುಹೋದನು.

ಭಗವಂತನು ೧೮ನೆಯ ಚಾತುರ್ಮಾಸವನ್ನು ಕಳೆಯುತ್ತಿದ್ದಾಗ ಆನಂದನು ಆತನ ಕೈಯ್ಯಾಳಾಗಿ (Waiter) ನೇಮಿಸಲ್ಪಟ್ಟನು. ಅದೇ

ಕಾಲದಲ್ಲಿ ಕೋಸಲ ದೇಶದ ಪ್ರಸಿದ್ಧ ಹಾದಿಗಳ್ಳ ಕೊಲೆಗಾರನೂ ಆಗಿ
ಅಂಗುಲಿ ಮಾಲನೆಂಬವನಿದ್ದ ಕಾಡಿಗೆ ಯಾರು ತಡೆದರೂ ತಡೆಯದೆ ನೆಟ್ಟ
ಭಗವಂತನು ತಿಳಿಯದೆ ಹೋಗಿ ಆತನಿಗೆ ಧರ್ಮವನ್ನು ಬೋಧಿಸಿ ಆತ
ದುಶ್ಚಾಳಿ ಎಲ್ಲವನ್ನು ನೀಗಿಸಿ ಆತನನ್ನು ಸನ್ಮಾರ್ಗಕ್ಕೆ ತಂದನು. ಆ ಕಳ್ಳನ
ತಾನು ಕೊಂದವರೆಲ್ಲರ ಒಂದೊಂದು ಅಂಗುಲಿಯನ್ನು ಅಂದರೆ, ಒಂದೊಂ
ಬೆರಳನ್ನು ಪೋಣಿಸಿದ ಸರವನ್ನು ತೊಟ್ಟುಕೊಂಡಿದ್ದ ಕಾರಣ ಆತನಿ
ಅಂಗುಲಿ ಮಾಲನೆಂದು ಹೆಸರಾಯಿತಂತೆ.

ಬಿಂಬಿಸಾರನ ಕೊಲೆ

ಹಾಗೆಯೇ ವರ್ಷದ ಹಿಂದೆ ವರ್ಷ ಹೋಗುತ್ತ ಭಗವಂತನಿಗೆ ೭
ವರ್ಷಗಳ ವಯಸ್ಸಾಯಿತು. ಅದಕ್ಕೆ ಶಾನೆ ಹಿಂದಿನಿಂದ ಬುದ್ಧನಂತೆಯೆ
ಶಾಕ್ಯಕುಲದವನೂ ಬುದ್ಧನ ಸಮೀಪ ಬಂಧುವೂ ಆದ ದೇವದತ್ತನೆಂಬವ
ಹೃದಯದಲ್ಲಿ ಭಗವಂತನ ಮೇಲೆ ಮತ್ಸರವೂ ದ್ವೇಷವೂ ದಿನೇ ದಿನೇ ಬೆಳೆ
ಬರುತ್ತಿತ್ತು. ಆತನು ರಾಜಗೃಹದ ಅರಸನಾದ ಬಿಂಬಿಸಾರನ ಹಿರೇಮಗನಾ
ಅಜಾತಶತ್ರು ಎಂಬ ರಾಜಕುಮಾರನ ಸ್ನೇಹವನ್ನು ಸಂಪಾದಿಸಿ, ಅದರ ಬ
ದಿಂದ ಬೇಗನೆ ತಾನು ಬುದ್ಧನ ಭಿಕ್ಷು ಸಂಘದ ನಾಯಕನಾಗಬೇಕೆಂದ
ಹಂಬಲಿಸುತ್ತಿದ್ದನು. ಒಮ್ಮೆ ಆತನು ಭಗವಂತನೊಡನೆ ಹೀಗೆಂದನು—
'ಭಗವನ್, ನೀನೀಗ ವೃದ್ಧನಾದೆ; ಇನ್ನು ಸಂಘದ ನಾಯಕತ್ವವನ್ನು ನೀ
ಅದನ್ನು ತನಗೆ ಕೈವರ್ತಿಸಬೇಕು'. ಹೀಗೆ ೩ ಬಾರಿ ಕೇಳಿದರೂ ಬಾ
ಬಾರಿಗೂ ನಿರಾಕರಣೆಯಾಯಿತು. ಆಗ್ಗೆ ದೇವದತ್ತನು ರೋಷಾವಿಷ್ಟನಾ
ಅಜಾತ ಶತ್ರುವಿನ ಬಳಿಗೆ ಹೋಗಿ, 'ನೀನು ನಿನ್ನ ತಂದೆಯಾದ ಬಿಂಬಿಸಾ
ನನ್ನು ಕೊಂದು ಅರಸನಾಗು, ನಾನು ಭಗವಂತನನ್ನು ಕೊಂದು ಬುದ್ಧನಾಗುವೆ
ಎಂದನು. ಅಜಾತಶತ್ರು ಅದಕ್ಕೆ ಒಪ್ಪಿದ್ದನು, ಹಾಗೂ ಕೆಲವು ಗ್ರಂಥಗಳ
ಹೇಳಿರುವಂತೆ, ಆತನು ತನ್ನ ತಂದೆಯನ್ನು ಕೊಂದು ತಾನು ಅರಸನಾದನು
ಅಥವಾ ಮತ್ತೆ ಕೆಲವಲ್ಲಿ ಹೇಳಿರುವಂತೆ, ಆತನು ತನ್ನ ತಂದೆಯನ್ನು ಕೊಲ್ಲ
ಲಿಕ್ಕೆ ಮಾಡಿದ ಪ್ರಯತ್ನವು ನೆರವೇರುವಷ್ಟರಲ್ಲಿ ಬಿಂಬಿಸಾರನಿಗೆ ತಿಳಿಯ
ಬಂದು ಬಿಂಬಿಸಾರನು ತನ್ನ ಮಗನನ್ನು ಕರತರಿಸಿ ತನ್ನ ರಾಜ್ಯಭಾರವನ್ನು

ಆತನಿಗೆ ಒಪ್ಪಿಸಿ ತಾನು ನಿವೃತ್ತನಾದನು; ಹೇಗೂ ಅಜಾತಶತ್ರು ಮಗಧ ರಾಜ್ಯದ ಅರಸನಾದನು. ಆಗ್ಗೆ ದೇವದತ್ತನು ಆತನ ಬಳಿಗೆ ಹೋಗಿ, ತಾನು ಬುದ್ಧನನ್ನು ಕೊಲ್ಲುವೆ, ಆ ಬಗ್ಗೆ ನಿನ್ನ ನೆರವನ್ನು ನೀಡಬೇಕೆಂದು ಹೇಳಿದಾಗ, ಅಜಾತಶತ್ರು ಅದಕ್ಕೆ ಸಮ್ಮತಿಸಿ ಆತನ ಸಹಾಯದಿಂದ ದೇವದತ್ತನು ೧೬ ಮಂದಿ, ಕೊಲೆಗಾರರನ್ನು ಬಾಡಿಗೆಗೆ ಪಡೆಕೊಂಡು ಭಗವಂತನ ಮೇಲೆ ಛೂ ಬಿಟ್ಟನು. ಅವರು ಭಗವಂತನಿದ್ದಲ್ಲಿಗೆ ಹೋಗಿ ಆತನನ್ನು ಕಂಡೊಡನೆ ತಮ್ಮ ದುರಾಲೋಚನೆಯನ್ನು ಬಿಟ್ಟು ಬಿಟ್ಟು ಆತನಿಂದ ಧರ್ಮೋಪದೇಶವನ್ನು ಹೊಂದಿದರು. ಅವರಲ್ಲಿ ಒಬ್ಬನು ಮರಳಿ ಬಂದು ಭಗವಂತನನ್ನು ಕೊಲ್ಲು ವುದೇ ಅಲ್ಲ, ಕೊಲ್ಲಬೇಕೆಂದು ಬಗೆವುದಾದರೂ ಅಸಾಧ್ಯವೆಂದು ಹೇಳಿ ಹೋದನು. ದೇವದತ್ತನಾಗ ಬೇರೆ ಉಪಾಯವನ್ನು ಕಂಡುಕೊಂಡು ಭಗ ವಂತನು, ರಾಜಗೃಹದಲ್ಲಿಯ ಗೃಧ್ರ ಕೂಟ ಎಂಬ ಗುಡ್ಡದ ನೆರಳಿನಲ್ಲಿ ಅತ್ತಿತ್ತ ಶತಪಥ ಗೆಯ್ಯುತಿದ್ದಾಗ ಮೇಲಿಂದ ಒಂದು ದೊಡ್ಡ ಬಂಡೆಯನ್ನು ಆತನ ಮೇಲೆ ಉರುಳಿಸಿದನು. ಅದು ಭಗವಂತನನ್ನು ತಗಲದೆ ಓರೆಯಾಗಿ ಹೋಯಿತು, ಅದರದೊಂದು ಚಕ್ಕೆಯಾದರೆ ಭಗವಂತನ ಕಾಲಿಗೆ ತಗಲಿ ನೆತ್ತ ರನ್ನು ಹೊರಡಿಸಿತು. ಭಗವಂತನಾದರೆ ಆತನನ್ನು ಕ್ಷಮಿಸಿದನಲ್ಲದೆ ದೂರ ಲಿಲ್ಲ. ದೇವದತ್ತನು ಅಷ್ಟರಲ್ಲೇ ಬಿಟ್ಟುಬಿಡದೆ ನಾಲಾಗಿರಿ ಎಂಬ ಆನೆಗೆ ತುಂಬ ಕುಡಿಸಿ ಮದವೇರಿಸಿ, ಅದನ್ನು ರಾಜಗೃಹದ ರಥಬೀದಿಯಲ್ಲಿ ಬಿಡಿಸಿ ಬಿಟ್ಟನು. ಅದು ಭಗವಂತನನ್ನು ಕಾಣುತ್ತಲೆ ತೀರ ಸಾಧುವಾಗಿ ಸೊಂಡಿ ಲನ್ನು ಬಗ್ಗಿಸಿ ನಿಂತಲ್ಲೇ ನಿಂತುಬಿಟ್ಟಿತು; ಹೀಗೆ ದೇವದತ್ತನ ಯಾವ ದುಷ್ಪ್ರ ಯತ್ನವಾದರೂ ಭಗವಂತನ ಮೇಲೆ ನಡೆಯಲಿಲ್ಲ.

ಬುದ್ಧನ ಪರಿನಿರ್ವಾಣ

ಹಾಗೆಯೇ ಭಗವಂತನಿಗೆ ೭೯ ವರ್ಷಗಳು ತುಂಬಿ ೮೦ನೆಯ ವರ್ಷ ತೊಡಗಿದ ಹೆಚ್ಚು ಕಡಿಮೆ ಮಾಘಶುದ್ಧ ಹುಣ್ಣಿಮೆಯುಂದು ತಿರುಗೊಮ್ಮೆ ಮಾರನು ಆತನ ಬಳಿಗೆ ಬಂದು, ಭಗವಾನ್ ಇನ್ನಾದರೂ ಬದುಕಿರುವುದನ್ನು ಮುಗಿಸೆಯಾ? ಎಂದು ಕೇಳಿದಾಗ, ಮಾರನೇ ಇನ್ನು ನಾನು ತಡೆಯೆ, ಇಂದಿ ನಿಂದ ೩ ತಿಂಗಳಲ್ಲಿ ಪರಿನಿರ್ವಾಣ ಹೊಂದುವೆ ಎಂದು ಭಗವಂತನು ಉತ್ತರ

ವಿತ್ತನು. ಆ ೩ ತಿಂಗಳಿನ ದಿನಗಳು ಒಂದರ ಹಿಂದೆ ಒಂದು ಸರಿದು ಹೋ
ಕೆಲವಷ್ಟೇ ಉಳಿದಿದ್ದಾಗ ಭಗವಂತನು ಪಾವಾಪುರಿಗೆ ಹೋಗಿ ಅಲ್ಲಿ
ಚುಂದನೆಂಬ ಕಮ್ಮಾರನ ಆಮ್ರವನದಲ್ಲಿ ತಂಗಿದನು. ಮಾರನೆಯ
ಚುಂದನ ಮನೆಯಲ್ಲಿ ಊಟಕ್ಕೆ ಕರೆಯಲ್ಪಟ್ಟು ಅಲ್ಲಿಗೆ ಹೋದಾಗ ಅಲ್ಲಿ ಇ
ಮೇಲೋಗರಗಳ ಜತೆಯಲ್ಲಿ ಬಡಿಸಿದ ಸೂಕರಮದ್ದವ ಎಂಬುದ
ಉಂಡನು. ಈಗ, ಸೂಕರಮದ್ದವ ಎಂದರೆ ಕಾಡು ಹಂದಿಯು ಒಣ ಮಾ
ಎಂದು ಈ ವರೆಗೆ ಬಗೆಯಲ್ಪಟ್ಟಿದೆ, ಹಾಗೆಯೇ ನಂಬಿ ಬರುತ್ತದೆ; ಆ
ಇತ್ತೀಚೆ ಚೀನದ ವಿದ್ವಾಂಸರೊಬ್ಬರು ಅದು ಸರ್ವಥಾ ಮಾಂಸವಲ್ಲ, ಒಂ
ಬಗೆಯ ಅಣಜೆ (Fungus) ಅಂದರೆ ನಾಯಿಕೊಡೆ (Mushroor
ಎಂದು ಸಾಧಾರವಾಗಿ ತೋರಿಸಿದ್ದಾರೆ.* ಅದನ್ನು ಉಂಡಂದಿನಿಂದ ಆತನಿ
ಪ್ರಬಲವಾದ ಆಮಶಂಕೆ ತಲೆದೋರಿತು. ಆಗ್ಗೆ ಆತನು ಅಲ್ಲಿಂದ ಸಂ
ಸಮೇತನಾಗಿ ಕುಶಿನಾರಕ್ಕೆ ಹೋಗಲಿಕ್ಕೆ ಹೊರಟು ದಾರಿಯಲ್ಲಿ ಬಾಯಾ
ಆನಂದನಿಂದ ತಾವೀಗತಾನೆ ದಾಟಿದ ಹಳ್ಳದಿಂದ ನೀರನ್ನು ತರಿಸಿ, ಅದನ
ಕುಡಿದು, ಮುಂದೆ ಹೋಗುತಿದ್ದಾಗ, ಕುಶಿನಾರದಿಂದ ಪಾವೆಗೆ ಹೇ
ತುಂಬಿದ ಹಲವು ಬಂಡಿಗಳನ್ನು ಅಟ್ಟಿಕೊಂಡು ಹೋಗುತಿದ್ದ ಪುಕ್ಕುಸನೆಂ
ಮಲ್ಲ ಜಾತಿಯ ವ್ಯಾಪಾರಿಯೊಬ್ಬನು, ಅಲ್ಲಿ ದಾರಿಯಲ್ಲಿ ಒಂದು ಮರದ ಅ
ಯಲ್ಲಿ ಕುಳಿತುಕೊಂಡಿರುವ ಭಗವಂತನನ್ನು ಕಂಡು, ಆತನಿಂದ ಧರ್ಮೋ
ದೇಶ ಹೊಂದಿ ತನ್ನ ಬಳಿಯಲ್ಲಿದ್ದ ನೂತನವಾದ ಹೊಂಬಣ್ಣದ ಅರುವೆಗಳ
ಡನ್ನು ಭಗವಂತನಿಗೆ ಕಾಣಿಕೆಯಾಗಿ ಇತ್ತಾಗ, ಬುದ್ಧನು ಅವಲ್ಲಿ ಒಂದನ
ತಾನು ಹೊದ್ದುಕೊಂಡು ಮತ್ತೊಂದನ್ನು ಆತನಿಂದ ಆನಂದನಿಗೆ ಹೊದಿ
ದನು. ಪುಕ್ಕುಸನು ಅಲ್ಲಿಂದ ಮುಂದುವರಿದನು. ಭಗವಂತನು ಅಲ್ಲಿಂ
ಮುಂದಯ್ದು ಕಕುತ್ಥಾ ನದಿಯಲ್ಲಿ ಮಿಂದು ನೀರ್ಕುಡಿದು, ಅಲ್ಲಿಂದಲ
ಮುನ್ನಡೆದು ಹಿರಣ್ಯವತೀ ನದಿಯ ಆಚೆಯಲ್ಲಿದ್ದ ಕುಶಿನಾರವನ್ನು ಸೇ
ಅಲ್ಲಿಯ ಸಾಲ ವನವನ್ನು ಹೊಕ್ಕು ಎರಡು ಸಾಲ ವೃಕ್ಷಗಳ ನಡು
ಬಡಗು ದಿಕ್ಕಿಗೆ ತಲೆ ಮಾಡಿಕೊಂಡು ಕಾಲಿನ ಮೇಲೆ ಕಾಲಿಕ್ಕಿ ಕೈಯ್ಯನ

* ಭಾಂಡಾರಕರ್ ಓ. ರಿ. ಇ. ವೊ. ೨೨–೧೯೪೨—ಸುಕರಮದ್ದವ ಮತ್ತು
ಬುದ್ಧನ ಮರಣ—ಲೇಖಕರು:—ಫಾ. ಚೌ. ಪು. ೧೨೭—೧೩೩.

ತಲೆದಿಂಬಾಗಿಸಿ ಸಿಂಹಶಯ್ಯೆಯಲ್ಲಿ ಮಲಗಿದನು. ಅಂದು ವೃಗವು ಹುಣ್ಣಿಮೆಯ ರಾತ್ರಿ, ಹಾಗೆ ಅಲ್ಲಿ ಮಲಗಿ ದಣುವಾರಿಸಿಕೊಳ್ಳುತ್ತಿದ್ದಾಗಲೂ ಭಗವಂತನಿಗೆ ವಿಶ್ರಾಂತಿ ಇರಲಿಲ್ಲ. ಆನಂದನೇ ಮೊದಲಾದ ಭಿಕ್ಷುಗಳ ಪ್ರಶ್ನೆಯ ಮೇಲೆ ಪ್ರಶ್ನೆ ಬರುತ್ತಲೇ ಇತ್ತು. ಮತ್ತೊಂದು ಕಡೆ ಕುಶಿನಾರದ ಮಲ್ಲರು ಅಂದಿನ ರಾತ್ರಿಯ ಕೊನೆಯ ಜಾವದಲ್ಲಿ ಭಗವಂತನು ಪರಿನಿರ್ವಾಣ ಹೊಂದುವನೆಂದು ಕೇಳಿ ಹಿಂಡು ಹಿಂಡಾಗಿ ಆತನ ಅಂತಿಮ ದರ್ಶನಕ್ಕಾಗಿ ಅಲ್ಲಿಗೆ ಬಂದರು. ಅವರಿಗೂ ಧರ್ಮೋಪದೇಶವಾಯಿತು. ಕೊನೆಯದಾಗಿ ಕುಶಿನಾರದಲ್ಲಿದ್ದ ಸುಭದ್ರನೆಂಬ ಪರಿವ್ರಾಜಕನು ಆ ಸುದ್ದಿ ಕೇಳಿ, ಭಗವಂತನಿಂದ ದೀಕ್ಷೆ ಪಡೆಯಲೆಂದು ಅಲ್ಲಿಗೆ ಬಂದನು. ಆನಂದನು ಭಗವಂತನ ಮೇಲೆ ಹಾಗೂ ಆತನ ಆಗಣ ಶಾರೀರಕ ಸ್ಥಿತಿಯ ಮೇಲೆ ಅತ್ಯಂತ ಮಮತೆಯಿಂದ ಆತನಿಗೆ ಭಗವಂತನನ್ನು ನೋಡಗೊಡಲಿಲ್ಲ. ಆತನು ಮೂರು ಮೂರು ಬಾರಿ ಬೇಡಿದರೂ 'ಕಾಡಬೇಡೈ ತಥಾಗತನ, ಗೆಳೆಯ ಸುಭದ್ರ, ದಣಿದಿಹಂ ಭಗವಂತ' ಎಂದು ನಿರಾಕರಿಸಿದನು. ಅವರ ಮಾತುಗಳನ್ನು ಭಗವಂತನು ಕೇಳಿ, 'ಆನಂದ, ತಡಮಾಡದೆ ಸುಭದ್ರನಿಗೆ ತಥಾಗತನನ್ನು (ಅಂದರೆ ತನ್ನನ್ನು) ಕಾಣಗೊಡು' ಎನುತ್ತಲೆ ಸುಭದ್ರನು ಭಗವಂತನು ಮಲಗಿದಲ್ಲಿಗೆ ಬಂದು ಆತನಿಂದ ದಿವ್ಯವಾದ ಉಪದೇಶವನ್ನು ಪಡೆದನು. ಆ ಬಳಿಕ ಬುದ್ಧನು ಆತನಿಗೆ ಪ್ರವ್ರಜ್ಯೆಯ (ಅಂದರೆ ಸನ್ನ್ಯಾಸದ) ದೀಕ್ಷೆಯಿತ್ತನು. ಸ್ವಯಂ ಬುದ್ಧನೇ ದೀಕ್ಷೆ ಕೊಟ್ಟವರಲ್ಲಿ ಸುಭದ್ರನು ಕೊನೆಯಾತನು.

ಭಗವಂತನಾಗ, 'ಭಿಕ್ಷುಗಳೇ ಈ ಸಂಸ್ಕಾರವು ವ್ಯಯ ಧರ್ಮ, ಅಂದರೆ ಹುಟ್ಟಿದ ಎಲ್ಲವೂ ನಾಶವಾಗತಕ್ಕುದು; ಆದುದರಿಂದ ಜಾಗ್ರತೆಯಾಗಿ ಪ್ರಯತ್ನಿಸುತ್ತಿರಿ' ಎಂದು ಕಣ್ಣು ಮುಚ್ಚಿದನು. ಇವೇ ಭಗವಂತನ ಕೊನೆಯ ಮಾತುಗಳು.

ಅಲ್ಲಿಂದ ಮತ್ತೆ ಭಗವಂತನು ಮೊದಲನೆಯ ಧ್ಯಾನವನ್ನು, ಅಲ್ಲಿಂದ ೨ನೆಯ ಧ್ಯಾನವನ್ನು, ಅಲ್ಲಿಂದ ೩ನೆಯ ಧ್ಯಾನವನ್ನು, ಅಲ್ಲಿಂದ ೪ನೆಯ ಧ್ಯಾನವನ್ನು ಏರೇರುತ್ತಲೂ ಇಳಿಯಿಸುತ್ತಲೂ ಹೋಗಿ, ಕೊನೆಗೆ ತನ್ನ ವಯಸ್ಸಿನ ೮೦ನೆಯ ವರ್ಷದಲ್ಲಿ ಅಂದಿನ ವೈಶಾಖ ಹುಣ್ಣಿಮೆಯ ರಾತ್ರಿಯ ಕೊನೆಯ ಜಾಮದಲ್ಲಿ ಪರಿನಿರ್ವಾಣ ಹೊಂದಿದನು. ಶಾಂತಿಃ! ಶಾಂತಿಃ!! ಶಾಂತಿಃ!!! ನನ್ನ

ನಿರ್ಣಯಿಕೆಯ ಪ್ರಕಾರ ಆತನ ಪರಿನಿರ್ವಾಣದ ದಿನ ಕ್ರಿ. ಪೂ. ೫೦೧ನೆಯ
ಇಸವಿಯ ಎಪ್ರಿಲ ೧೫ನೆಯ ತಾರೀಕು ಮಂಗಳವಾರ. ಆಗ್ಗೆ ಅನುರುದ್ಧನು
ಮಲ್ಲರಿಗೆ ಈ ವಾರ್ತೆಯನ್ನು ಅರುಹಲಿಕ್ಕೆ ಆನಂದನನ್ನು ಕಳುಹಿಸಿದನು.
ಆಗ್ಗೆ ಅವರೆಲ್ಲರೂ ಗಂಡಸರು ಹೆಂಗಸರು ಮಕ್ಕಳು ಕೂಡಿ ಗುಂಪುಗುಂಪಾಗಿ
ಅಲ್ಲಿಗೆ ಬಂದು ಗೋಳಾಡಿದರು. ೭ನೆಯ ದಿನಗಳ ವರೆಗೆ ಅವರ ಗೀತ
ಗಾನನೃತ್ಯಗಳಾದುವು. ೭ನೆಯ ದಿನ ಭಗವಂತನ ಕಳೇಬರವನ್ನು ಅವರಲ್ಲಿ
೮ ಮಂದಿ ಹೊತ್ತುಕೊಂಡು, ಆ ಬಗ್ಗೆ ಚಿತಿಯನ್ನು ರಚಿಸಿದ ಮಕುಟಬಂಧನ
ಎಂಬ ಮಂದಿರಕ್ಕೆ ಅವನನ್ನೊಯ್ದರು. ಅದಕ್ಕೆಷ್ಟು ಬೆಂಕಿ ಕೊಟ್ಟರೂ ಚಿತಿ
ಉರಿಯದ ಕಾರಣವನ್ನು ಅವರು ಅನುರುದ್ಧನೊಡನೆ ವಿಚಾರಿಸುತ್ತಲೆ, ಆತನು
'ಇಗೋ ಮಹಾ ಕಾಶ್ಯಪನೆಂಬಾತನು ಭಗವಂತನ ಅಂತಿಮ ದರ್ಶನದ ಬಗ್ಗೆ
ಬರುತ್ತಲಿದ್ದಾನೆ, ಅತನು ಬಂದು ಕಾಣುವವರೆಗೂ ಚಿತಿಗೆ ಬೆಂಕಿ ಹತ್ತದು'
ಎಂದನು. ಅಷ್ಟೆನುವಷ್ಟರಲ್ಲಿ ಮಹಾಕಾಶ್ಯಪನು ಅಲ್ಲಿಗೆ ಬಂದು ಚಿತಿಯನ್ನು
ಮೂರು ಬಾರಿ ಮುಟ್ಟಿ ಪ್ರದಕ್ಷಿಣೆಗೈಯ್ದು ಭಗವಂತನ ಅಡಿಗೆ ಎರಗುತ್ತಲೆ
ಚಿತಿ ಉರಿಯತೊಡಗಿತು, ಮಲ್ಲರು ಹಾಡಿ ಆಡಿ ಸುತ್ತ ಸುತ್ತ ಕುಣಿದಾಡುತ್ತಿ
ರುವಾಗ ಭಗವಂತನ ನಶ್ವರವಾದ ದೇಹವು ಅಗ್ನಿಯ ಪಾಲಾಯಿತು.

ಭಗವಂತನು ಪರಿನಿರ್ವಾಣ ಹೊಂದಿದನೆಂದು ಕೇಳುತ್ತಲೆ ರಾಜಗೃಹದ
ಅರಸನಾದ ಅಜಾತಶತ್ರುವೂ, ವೈಶಾಲಿಯ ಲಿಚ್ಛವಿಯರೂ, ಕಪಿಲವಸ್ತು
ವಿನ ಶಾಕ್ಯರೂ ಅಲ್ಲಕಪ್ಪದ ಬುಳಿಗಳೆಂಬ ಜನರೂ, ರಾಮ ಗ್ರಾಮದ ಕೋಳಿ
ಯರೆಂಬವರೂ, ಪಾವೆಯ ಮಲ್ಲರೂ ಮೊದಲಾದವರು ಭಗವಂತನ ಎಲುಬು
ಗಳೇ ಮುಂತಾದ ಅವಶೇಷಗಳಲ್ಲಿ ತಂತಮಗೆ ಪಾಲು ಕೊಡಬೇಕೆಂದು
ಕೇಳಿದರು. ಮೊತ್ತ ಮೊದಲಲ್ಲಿ ಕುಶಿನಾರದ ಮಲ್ಲರು ಯಾರೊಬ್ಬರಿಗೂ
ಪಾಲನ್ನೀಯಲೊಲ್ಲೆವು ಎಂದರೂ, ಕೊನೆಗೆ ದ್ರೋಣನೆಂಬೊಬ್ಬ ಬ್ರಾಹ್ಮಣ
ನೊಬ್ಬನು ಆ ಪವಿತ್ರವಾದ ಅವಶೇಷಗಳ ಮೇಲೆ ಅಲ್ಲಲ್ಲೆಲ್ಲ ಸ್ತೂಪಗಳು
ಕಟ್ಟಲ್ಪಡುವಂತೆ ಬೇಡಿದವರಿಗೆ ಕೊಡಿರಿ ಎಂದು ಸಮುದಾಯಿಸಿದುದಕ್ಕೆ ಅವರು
ಒಪ್ಪಿ ಅವನ್ನು ಎಂಟು ಪಾಲಾಗಿ ವಿಭಾಗಿಸಿ ಬೇಡಿದವರೆಲ್ಲರಿಗೆ ಒಂದೊಂದು
ಪಾಲನ್ನು ಹಂಚಿಕೊಟ್ಟು ಒಂದನ್ನು ತಾವೂ ಇರಿಸಿಕೊಂಡರು. ಆ ಅವಶೇಷ
ಗಳ ಮೇಲೆ ಈ ೮ ಕಡೆಗಳಲ್ಲಿ ಸ್ತೂಪಗಳಾದುವು—(೧) ರಾಜಗೃಹದಲ್ಲಿ,

(೨) ವೈಶಾಲಿಯಲ್ಲಿ, (೩) ಕಪಿಲವಸ್ತುವಿನಲ್ಲಿ, (೪) ಅಲ್ಲಕಪ್ಪದಲ್ಲಿ, (೫) ಪಾವೆಯಲ್ಲಿ, ಮತ್ತು (೬) ಕುಶಿನಾರದಲ್ಲಿ.

ಬುದ್ಧನು ಉಪದೇಶಿಸಿದ ಧರ್ಮವನ್ನು ಕುರಿತು ಆತನು ಬೋಧಿಸಿದುದೆಂಬ ಆಯಾ ಸೂತ್ರಗಳೆಲ್ಲವನ್ನು ಓದಿಯೇ ತಿಳಕೊಳ್ಳಬೇಕಾದರೂ, ಅದನ್ನು ಅತ್ಯಂತ ಸಂಕ್ಷೇಪವಾಗಿ ಹೇಳುವುದಾದರೆ—ಆತನ ಧರ್ಮಚಕ್ರ ಪ್ರವರ್ತನ ಸೂತ್ರದಲ್ಲಿ ಆತನು ವಿವರಿಸಿರುವ ೪ ಆರ್ಯ ಸತ್ಯಗಳನ್ನೂ ಆರ್ಯ ಅಷ್ಟಾಂಗಿಕ ಮಾರ್ಗವನ್ನೂ ಕುರಿತು ಓದಿ ಮನವರಿಸಿಕೊಳ್ಳಬೇಕು. ಆ ಸತ್ಯಗಳನ್ನೂ ಆ ಮಾರ್ಗವನ್ನೂ ಕುರಿತು ಕೆಲವೇ ಮಾತುಗಳಲ್ಲಾದರೂ ಮೇಲೆ ಹೇಳಿರುತ್ತೇನೆ.

ನಮೋ ತಸ್ಸ ಭಗವತೋ ಅರಹತೋ ಸಮ್ಮಾ ಸಂಬುದ್ಧಸ್ಸ

ಮೋಡರ್ನ್ ಪ್ರಿಂಟಿಂಗ್ ಪ್ರೆಸ್, ಮಂಗಳೂರು-1.